**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : 246161, 246165.**

# ತಾಂತ್ರಿಕ ಟೆಂಡರ್

## ದ್ವೈವಾರ್ಷಿಕ ದರ ಗುತ್ತಿಗೆ

ಹಾಲಿನ ಉಷ್ಣತೆಯನ್ನು ಕಾಪಾಡುವ ಇನ್ಸುಲೇಟೆಡ್ ಕಂಟೇನರ್ ಬಾಡಿ ಅಳವಡಿಸಿದ ವಾಹನಗಳಿಂದ ಸಂಸ್ಕರಿಸಿದ ಹಾಲನ್ನು ಬಿ.ಎಂ.ಸಿ. ಕೇಂದ್ರಗಳಿಂದ ಹಾಲು ಸಾಗಾಣಿಕೆ ಮಾಡಲು, ವಿವಿಧ ಸಾಮರ್ಥ್ಯದ ರೋಡ್ ಮಿಲ್ಕ್ ಟ್ಯಾಂಕರ್ ವಾಹನಗಳನ್ನು ಮತ್ತು ಟಾಟಾ ವಿಸ್ತಾ ಕಾರನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ತಾಂತ್ರಿಕ ಟೆಂಡರ್.

## ತಾಂತ್ರಿಕ ಟೆಂಡರ್ ಭಾಗ—1

| | | |
|---|---|---|
| 1 | ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ | ದಿನಾಂಕ: 23.05.2016 ರಿಂದ |
| 2 | ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 22.06.2016 ರಂದು ಸಂಜೆ: 17.30 ಗಂಟೆಯವರೆಗೆ |
| 3 | **ಭರ್ತಿ ಮಾಡಿದ ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | ದಿನಾಂಕ: **24.06.2016** ರಂದು : ಬೆಳಿಗ್ಗೆ **11.30** ಗಂಟೆಗೆ |
| 4 | **ಭರ್ತಿ ಮಾಡಿದ ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | ದಿನಾಂಕ: **27.06.2016 ರಂದು** ಬೆಳಿಗ್ಗೆ **11.30 ಗಂಟೆಗೆ** |

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : 246161, 246165.**

**ಐ.ಎಫ್.ಟಿ. ಸಂಖ್ಯೆ : ಶಿಸಹಾಒ: ಸಂಸ್ಕರಣೆ: ಟೆಂಡರ್: 2016–17/01/1208–ಎ** **ದಿ: 16.05.2016**

***ಬಿ.ಎಂ.ಸಿ. ಮಾರ್ಗದ ಹಾಲಿನ ಟ್ಯಾಂಕರ್‌ಗಳನ್ನು ಮತ್ತು ಕಾರು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ:–***

ಅ) ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯ ವಿವಿದೆಡೆ ಸ್ಥಾಪಿಸಿರುವ ಬಿ.ಎಂ.ಸಿ. ಕೇಂದ್ರಗಳಿಂದ ಹಾಲಿನ ಟ್ಯಾಂಕರ್ ಮೂಲಕ ಹಾಲು ಸಾಗಾಣಿಕೆ ಮಾಡಲು ಹಾಲಿನ ಟ್ಯಾಂಕರ್‌ಗಳಿಗೆ, ಕನಿಷ್ಠ ಸಾಮರ್ಥ್ಯ 12 ಎಂ.ಟಿ. 15 ಎಂ.ಟಿ

ಆ) ಅಭಿಯಂತರ ಕಚೇರಿ ಕೆಲಸ ಕಾರ್ಯಗಳ ಮಾರ್ಗಕ್ಕೆ ಟಾಟಾವಿಸ್ತಾ ಕಾರು ಒದಗಿಸಲು ಶಿವಮೊಗ್ಗ

ಇ) ಮೇಲ್ಕಂಡ ಎಲ್ಲಾ ವಾಹನಗಳ ಗುತ್ತಿಗೆ ಅವಧಿ ಎರಡು ವರ್ಷದ್ದಾಗಿರುತ್ತದೆ

**ನಿಬಂಧನೆಗಳು :**

1. ಟೆಕ್ನಿಕಲ್ /ಕಮರ್ಷಿಯಲ್ ಟೆಂಡರ್‌ನ್ನು ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಡಿ ಸಲ್ಲಿಸುವುದು.

2. ಸಲ್ಲಿಸಲ್ಪಟ್ಟ ಟೆಂಡರ್‌ಗಳಲ್ಲಿ ಟೆಕ್ನಿಕಲ್ ಟೆಂಡರ್‌ನ್ನು ದಿ: 24.06.2016 ರಂದು ಬೆಳಿಗ್ಗೆ 11.30 ಘಂಟೆಗೆ ತೆರೆಯಲಾಗುವುದು.

3. ಪ್ರತಿ ಮಾರ್ಗಕ್ಕೂ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ. ಸಲ್ಲಿಸುವುದು ಒಂದೇ ವಾಹನವುಳ್ಳವರು ಒಂದು ಮಾರ್ಗಕ್ಕಿಂತ ಹೆಚ್ಚಿನ ಮಾರ್ಗಗಳಿಗೆ ಅರ್ಜಿ ಸಲ್ಲಿಸುವಂತಿಲ್ಲ.

4. ವಾಹನ ಹೊಂದಿರುವವರು ಟೆಂಡರ್ ತೆರೆಯುವ ಸಮಯದಲ್ಲಿ, ಪರಿಶೀಲನೆಗಾಗಿ ಟೆಂಡರ್‌ನಲ್ಲಿ ಪ್ರಕಟಿಸಿರುವ ಮಾದರಿಯ/ಸಾಮರ್ಥ್ಯದ ವಾಹನಕ್ಕೆ ಸಂಬಂಧಿಸಿದ ದಾಖಲೆಗಳ ಮೂಲ ಪ್ರತಿ ಒದಗಿಸಬೇಕು. ವಾಹನ ಹೊಂದಿಲ್ಲದವರು ಹೊಸ ವಾಹನ ಖರೀದಿಸುವುದಾಗಿ ಪತ್ರ ನೀಡುವುದು. ಟೆಂಡರ್ ಒಪ್ಪಿಗೆಯಾದಲ್ಲಿ ನಿಗದಿತ ಮಾದರಿಯ ವಾಹನ ಒದಗಿಸತಕ್ಕದ್ದು.

5. ಟೆಂಡರ್ ಸಲ್ಲಿಸಬಯಸುವವರು ತಮ್ಮ ಹೆಸರಿಗೆ ಸ್ವಂತ ವಾಹನ ಹೊಂದಿರಬೇಕು. ಸ್ವಂತ ವಾಹನ ಹೊಂದಿಲ್ಲದವರಿಗೆ ಟೆಂಡರ್ ಒಪ್ಪಿಗೆ ಆದಲ್ಲಿ ನಿಗದಿತ ಅವಧಿಯೊಳಗೆ ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿದ ಸಾಮರ್ಥ್ಯದ ವಾಹನವನ್ನು ಟೆಂಡರ್ ಒಪ್ಪಿಗೆ ಆದೇಶ ತಲುಪಿದ 45 ದಿನಗಳೊಳಗಾಗಿ ವಾಹನ ಒದಗಿಸತಕ್ಕದ್ದು. ತಪ್ಪಿದ್ದಲ್ಲಿ ಇಎಂಡಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು /ವಾಪಸ್ಸು ನೀಡಲಾಗುವುದಿಲ್ಲ.

ಪ್ರತಿ ಮಾರ್ಗಕ್ಕೆ ನೀಡಬೇಕಾದ ಇ.ಎಂ.ಡಿ / ಭದ್ರತಾ ಠೇವಣಿ ಮತ್ತು / ಮಾರ್ಗಗಳ ವಿವರ ಮತ್ತು ಇತರೆ ನಿಬಂಧನೆಗಳ ವಿವರವಾದ ಷೆಡ್ಯೂಲ್‌ನ್ನು ಹಾಗೂ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯು ಟೆಂಡರ್ ಫಾರಂನಲ್ಲಿ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಶಿವಮೊಗ್ಗ ಹಾಲು ಒಕ್ಕೂಟದ ಕಛೇರಿ ವೇಳೆಯಲ್ಲಿ/ ಸಾರಿಗೆ ವಿಭಾಗದಿಂದ ಪಡೆಯಬಹುದು. **ದೂರವಾಣಿ : (08182) 246170**

ಸಹಿ/-
ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ
ಶಿವಮೊಗ್ಗ.

ದಿನಾಂಕ : 16.05.2016
ಸ್ಥಳ : ಶಿವಮೊಗ್ಗ ಡೈರಿ

# ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಅರ್ಜಿ

**ಇವರಿಗೆ :**

**ನಿರ್ವಾಹಕ ನಿರ್ದೇಶಕರು**
**ಶಿವಮೊಗ್ಗ ಹಾಲು ಒಕ್ಕೂಟ**
**ಮಾಚೇನಹಳ್ಳಿ ನಿದಿಗೆ ಅಂಚೆ**
**ಶಿವಮೊಗ್ಗ – 577 222.**

**ಇಂದ**

**ಹೆಸರು : .................................**
**ತಂದೆಯ ಹೆಸರು :....................**
**ವಿಳಾಸ..................................**
**............................................**
**ಪಿನ್ ಕೋಡ್ :........................**
**ಮೊಬೈಲ್ ನಂ :**
ದೂರವಾಣಿ ಸಂ:

ಸ್ವಾಮಿ,

**ವಿಷಯ :** ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ನ ದ್ವೈವಾರ್ಷಿಕ ದರ ಗುತ್ತಿಗೆ ಪಡೆಯುವ ಸಲುವಾಗಿ.

ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯ ಬಿ.ಎಂ.ಸಿ. ಕೇಂದ್ರಗಳಿಂದ ಹಾಲು ಸಾಗಾಣಿಕೆ ಮಾಡಲು, ವಿವಿಧ ಸಾಮರ್ಥ್ಯದ ರೋಡ್ ಮಿಲ್ಕ್ ಟ್ಯಾಂಕರ್ ಸಾಗಾಣಿಕೆ ವಾಹನಗಳನ್ನು ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ನ ದ್ವೈವಾರ್ಷಿಕ ಗುತ್ತಿಗೆ ಹಾಗೂ ತಾಂತ್ರಿಕ ಟೆಂಡರ್ ಭಾಗ –1 ರ ಅರ್ಹತೆ ಪಡೆಯುವ ಸಲುವಾಗಿ ಅರ್ಜಿ ಸಲ್ಲಿಸುತ್ತಿರುವ ಬಗ್ಗೆ ನನ್ನ ದರ ನಮೂದಿಸಿ ಅಗತ್ಯವಿರುವ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಈ ಕೆಳಕಂಡಂತೆ ಸಲ್ಲಿಸುತ್ತಿದ್ದೇನೆ.

ಶ್ರೀ/ಶ್ರೀಮತಿ.................................................... ಆದ ನಾನು / ನನ್ನ ಪರವಾಗಿ ಮಾರ್ಗ ಸಂಖ್ಯೆ .......................ರ................... ಬಿ.ಎ೦.ಸಿ. ಮಾರ್ಗಗಳಿಗೆ/ಕಾರಿನ ಮಾರ್ಗಕ್ಕೆ ತಕ್ಕ ಸಾಮರ್ಥ್ಯದ ವಾಹನವನ್ನು ಹೊಂದಿದ್ದು, ದೃಢೀಕೃತ ದಾಖಲೆಗಳೊಂದಿಗೆ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ನ ಕಾನೂನಿಗೆ ಒಳಪಟ್ಟು, ಟೆಂಡರ್‌ನಲ್ಲಿ ಭಾಗವಹಿಸಲು ದಾಖಲೆಗಳನ್ನು ಲಗತ್ತಿಸಿರುತ್ತೇನೆ.

ನಾನು ಟೆಂಡರ್ ಪ್ರಕಟಣೆಯಲ್ಲಿ ತಿಳಿಸಿರುವ ಸೂಚನೆಗಳು ನಿಯಮ ಮತ್ತು ನಿಬಂಧನೆಗೊಳಪಟ್ಟು ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಗುತ್ತಿಗೆಯಲ್ಲಿ ಭಾಗವಹಿಸುತ್ತಿದ್ದೇನೆ. ನನಗೆ ಟೆಂಡರ್ ಒಪ್ಪಿಗೆಯಾದಲ್ಲಿ ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಿರುವ ಸಾಮರ್ಥ್ಯದ ಮತ್ತು ಮಾದರಿಯ ವಾಹನ ಒದಗಿಸಲು ಬದ್ಧನಾಗಿರುತ್ತೇನೆ.

ನನಗೆ ತಿಳಿದ ಮಟ್ಟಿಗೆ ಟೆಂಡರ್ ಸಮಿತಿಯು ಅರ್ಜಿಯನ್ನು ಯಾವುದೇ ಸೂಚನೆ ನೀಡದೆ ಅಂಗೀಕರಿಸುವ ಮತ್ತು ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತದೆ.

ವಾಣಿಜ್ಯ ಟೆಂಡರ್ ಭಾಗ–2ನ್ನು ತೆರೆದ ದಿನದಿಂದ 60 ದಿನಗಳ ಕಾಲ ನನ್ನ ಟೆಂಡರ್ / ದರ ನೀಡಿಕೆ ಊರ್ಜಿತಾವಸ್ಥೆಯಲ್ಲಿಡಲು ಒಪ್ಪಿರುತ್ತೇನೆ.

**ಮಾರ್ಗದ ಹೆಸರು :**

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

**ಅಡಕಗಳು :**

1. ನನ್ನ ಪರವಾಗಿ ಸಹಿ ಮಾಡುವ ಅಧಿಕಾರ ಪತ್ರ
2. ತಾಂತ್ರಿಕ ಟೆಂಡರ್ ಅರ್ಜಿಯನ್ನು ಪ್ರತ್ಯೇಕವಾಗಿ ಸಲ್ಲಿಸಿದೆ.
3. ವಾಣಿಜ್ಯ ಟೆಂಡರ್ ಅರ್ಜಿಯನ್ನು ದರ ಪಟ್ಟಿಯೊಂದಿಗೆ ಪ್ರತ್ಯೇಕವಾಗಿ ಸಲ್ಲಿಸಿದೆ.

# ಅನುಬಂಧ – ಬಿ

## ದರಪಟ್ಟಿ ಸಲ್ಲಿಸಲು ನಿಯಮ ನಿಬಂಧನೆಗಳು

### 1.0 ಸಾಗಾಣಿಕೆ ಗುತ್ತಿಗೆ ವ್ಯಾಪ್ತಿ :

1.1 ಬಿ.ಎಂ.ಸಿ. ಹಾಲು ಶೇಖರಣೆ ಮಾರ್ಗಕ್ಕೆ ವಾಹನ ಒದಗಿಸುವುದಾಗಿ ಸಾರಿಗೆ ಗುತ್ತಿಗೆ ಪಡೆಯುವ ಟೆಂಡರ್‌ದಾರರು ಒಕ್ಕೂಟದಿಂದ ನೀಡುವ ವೇಳಾಪಟ್ಟಿಯಂತೆ ಬೆಳಿಗ್ಗೆ ಮತ್ತು ಸಂಜೆ ಎರಡು ಸರತಿಗಳಲ್ಲಿ ಅಥವಾ ಒಕ್ಕೂಟವು ಸೂಚಿಸಿದ ವೇಳಾಪಟ್ಟಿಯಂತೆ ಬಿ.ಎಂ.ಸಿ. ಕೇಂದ್ರದವರು ನೀಡುವ ಕಚ್ಚಾ/ಸಂಸ್ಕರಿಸಿದ ಹಾಲನ್ನು ಇನ್ಸುಲೇಟೆಡ್ ಮುಚ್ಚಳಿಕೆ ಇರುವ ಟ್ಯಾಂಕರ್‌ಗೆ ಏರಿಸಿಕೊಂಡು ಸೂಚಿಸಿದ ಸಮಯದೊಳಗಾಗಿ ಬಿ.ಎಂ.ಸಿ. ಕೇಂದ್ರಕ್ಕೆ/ ಶೀತಲೀಕರಣ/ಡ್ಶೆರಿಗೆ ಸಾಗಾಣಿಕೆ ಮಾಡತಕ್ಕದ್ದು, ಡ್ಶೆರಿ/ಶೀಥಲೀಕರಣ ಕೇಂದ್ರದಿಂದ ಹೊರಗೆ ಹೋಗುವ ಮುನ್ನ ಟ್ರಿಕ್/ಟ್ರೀಪ್ ಶೀಟ್ ಪಡೆದು ಉಗ್ರಾಣ/ಶೇಖರಣೆ ಅಥವಾ ಸಂಬಂಧಿಸಿದ ವಿಭಾಗದಲ್ಲಿ ನೀಡುವ ಔಟ್ ಪಾಸ್ (Out Pass) ಪಡೆದು ಭದ್ರತಾ ವಿಭಾಗದಲ್ಲಿ ದಾಖಲಿಸಿ ಡ್ಶೆರಿ/ಶೀತಲೀಕರಣ ಕೇಂದ್ರದ ಹೊರಗೆ ಹೋಗತಕ್ಕದ್ದು.

1.2 ಗುತ್ತಿಗೆದಾರರು/ಸಾಗಾಣಿಕೆದಾರರು, ಕಚ್ಚಾ ಹಾಲು ಅಥವಾ ಸಂಸ್ಕರಿಸಿದ ಹಾಲನ್ನು ನಿಗದಿತ ಸಂಘಗಳಿಂದ / ಡ್ಶೆರಿಯಿಂದ / ಶೀತಲೀಕರಣ ಕೇಂದ್ರದಿಂದ ನಿಗಧಿತ ಸ್ಥಳಕ್ಕೆ ಸಾಗಾಣಿಕೆ ಮಾಡಿ, ಅವನಿಗೆ /ಅವಳಿಗೆ ಒಪ್ಪಿಸಿರುವ ಮಾರ್ಗದಲ್ಲಿನ ಡ್ಶೆರಿ/ಶೀತಲೀಕರಣ ಕೇಂದ್ರಕ್ಕೆ ಬೆಳಿಗ್ಗೆ ಹಾಗೂ ಮದ್ಯಾಹ್ನ ಎರಡೂ ವೇಳೆಗಳಲ್ಲಿ ಅಥವಾ ಹಾಲು ಉತ್ಪಾದನಾ ಘಟಕ (ಡೇರಿ) ನಿಗದಿಪಡಿಸಿರುವ ವೇಳಾ ಪಟ್ಟಿಯಂತೆ ಪೂರೈಕೆ ಮಾಡತಕ್ಕದ್ದು. ಹಾಲನ್ನು ವಾಹನಕ್ಕೆ ಭರ್ತಿ ಮಾಡುವ ಹಾಗೂ ಅದನ್ನು ವಾಹನದಿಂದ ಇಳಿಸುವ ವೆಚ್ಚವನ್ನು ಗುತ್ತಿಗೆದಾರರೇ ಭರಿಸುವುದು. ಒಕ್ಕೂಟದಿಂದ ಇದಕ್ಕೆ ಪ್ರತ್ಯೇಕ ವೆಚ್ಚ ನೀಡಲಾಗುವುದಿಲ್ಲ.

1.3 ಶೀತಲೀಕರಣ ಕೇಂದ್ರಕ್ಕೆ/ಡ್ಶೆರಿಗೆ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಪೂರೈಕೆ ಮಾಡಿದ ನಂತರ, ಡ್ಶೆರಿಯಿಂದ ಹೊರಗೆ ಹೋಗಲು ಡ್ಶೆರಿಯ/ಶೀತಲೀಕರಣ ಕೇಂದ್ರಗಳ ಅಥವಾ ಸಂಬಂಧಿಸಿದ ವಿಭಾಗದಿಂದ ಅಧಿಕೃತ ಅನುಮತಿ (ಔಟ್ ಪಾಸ್) ಪಡೆಯತಕ್ಕದ್ದು.

1.4 ಬಿ.ಎಂ.ಸಿಯ ನಿಗದಿತ ಸ್ಥಳದಿಂದ ಹಾಲು ಪಡೆದುಕೊಳ್ಳುವ ಸಂದರ್ಭದಲ್ಲಿ ಗುತ್ತಿಗೆದಾರರು ಅಥವಾ ಗುತ್ತಿಗೆದಾರರಿಂದ ಅಧಿಕೃತವಾಗಿ ನೇಮಿಸಲ್ಪಟ್ಟಿರುವ ಪ್ರತಿನಿಧಿಗಳು, ಹಾಜರಿದ್ದು, ಗುಣಮಟ್ಟದ ಹಾಲನ್ನು ಟ್ಯಾಂಕರಿಗೆ ಭರ್ಥಿಮಾಡುವುದು. ತಪ್ಪಿದಲ್ಲಿ ಅಂತಹ ನಷ್ಟಕ್ಕೆ ಗುತ್ತಿಗೆದಾರರನ್ನೇ ಜವಾಬ್ದಾರರನ್ನಾಗಿ ಮಾಡಿ ಅವರ ಸಾಗಾಣಿಕೆ ಬಿಲ್ಲಿನಲ್ಲಿ ಒಕೂಟಕ್ಕೆ ಆದ ನಷ್ಟದ ಮೊತ್ತವನ್ನು ವಸೂಲಿ ಮಾಡಲಾಗುವುದು.

**2.0 ಅರ್ಹತೆಗಳು :**

2.1 ಎಲ್ಲಾ ಅರ್ಜಿ ಮೂಲಗಳವರಿಗೂ ದರಪಟ್ಟಿ ದಸ್ತಾವೇಜು ಸಲ್ಲಿಸಲು ಮುಕ್ತ ಅವಕಾಶ ಕಲ್ಪಿಸಲಾಗಿದೆ.

2.2 ಗುತ್ತಿಗೆ ಪಡೆದುಕೊಳ್ಳಲು ಅರ್ಹರಾಗಬೇಕಾದರೆ ಪರಿಣಾಮಕಾರಿಯಾಗಿ ಕೆಲಸ/ ಕಾರ್ಯ ನಿರ್ವಹಿಸಲು ಬೇಕಾದ ಸಾಮರ್ಥ್ಯ ಅಗತ್ಯ ಸಂಪನ್ಮೂಲಗಳಿರುವುದರ ಬಗ್ಗೆ ದಾಖಲೆ, ಪುರಾವೆಗಳನ್ನು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಒದಗಿಸತಕ್ಕದ್ದು. ಈ ಕಾರಣದಿಂದಾಗಿ ದರಪಟ್ಟಿ, ದಸ್ತಾವೇಜು ಸಲ್ಲಿಸುವುದರ ಪ್ರಸ್ತಾವನೆಗಳಲ್ಲಿ ಕೆಳಗೆ ನಮೂದಿಸಿರುವ ಮಾಹಿತಿಗಳನ್ನು ಪೂರೈಕೆ ಮಾಡತಕ್ಕದ್ದು.

ಅ) ಕಾಮಗಾರಿಗೆ ದರಪಟ್ಟಿ : ದಸ್ತಾವೇಜು ಸಲ್ಲಿಸುವವರು ಹಾಲಿ ವಾಹನ ಹೊಂದಿದ್ದಲ್ಲಿ, ಸಾಗಾಣಿಕೆಗೆ ಬಳಸುವ ವಾಹನದ ಆರ್.ಸಿ. ಪುಸ್ತಕದ ನಕಲು ಪ್ರತಿ ಹಾಗೂ ಸಂಬಂಧಪಟ್ಟ ಅಗತ್ಯ ದಾಖಲೆಗಳನ್ನು ದರಪಟ್ಟಿ – ದಸ್ತಾವೇಜಿನೊಂದಿಗೆ ಲಗತ್ತಿಸತಕ್ಕದ್ದು.

ಆ) ಶಿವಮೊಗ್ಗ ಹಾಲು ಒಕ್ಕೂಟದ ಬಿ.ಎಂ.ಸಿ. ಕೇಂದ್ರಗಳಿಗೆ ಹಾಲು ಸಾಗಾಣಿಕೆ ಮಾಡಲು, ವಿವಿಧ ಸಾಮರ್ಥ್ಯದ ಸಾಗಾಣಿಕೆ ವಾಹನಗಳನ್ನು 2005 ರ ನಂತರದ ಮಾಡೆಲ್ ಆಗಿರಬೇಕು, ಟಾಟಾ ವಿಸ್ತಾ ಕಾರುಗಳು ಹಳದಿ ಬೋರ್ಡ್ ಹೊಂದಿದ್ದು 2010ರ ಅಥವಾ ನಂತರದ ಮಾಡಲ್ ಆಗಿರಬೇಕು.

ಇ) ಟೆಂಡರ್ ಸಲ್ಲಿಸುವವರ ಹೆಸರಿಗೆ ವಾಹನದ ದಾಖಲಾತಿಗಳಿರಬೇಕು. ಹಾಲಿ ವಾಹನ ಹೊಂದಿಲ್ಲದವರು ಸಹ ಟೆಂಡರ್ ಹಾಕಲು ಅರ್ಹರಿದ್ದು, ಆದರೆ ಟೆಂಡರ್ ದೊರಕಿದ 30 ದಿನಗಳೊಳಗಾಗಿ ನಿಗದಿಪಡಿಸಿದ ಮಾದರಿಯ ನಿಗದಿತ ಸಾಮರ್ಥ್ಯದ ವಾಹನ ಒದಗಿಸತಕ್ಕದ್ದು. ವಾಹನ ಒದಗಿಸಲು ವಿಫಲರಾದಲ್ಲಿ ಅಂತಹವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**3.0 ದರಪಟ್ಟಿ – ದಸ್ತಾವೇಜು ಸಲ್ಲಿಕೆ ವೆಚ್ಚ :**

3.1 ದರಪಟ್ಟಿ – ದಸ್ತಾವೇಜು ಸಲ್ಲಿಕೆಗೆ ಸಂಬಂಧಿಸಿದಂತೆ ಪೂರ್ವಭಾವಿ ಸಿದ್ಧತೆ, ಪ್ರಸ್ತಾವನೆ ಸಿದ್ಧಪಡಿಸುವುದು ಇವೇ ಮುಂತಾದುವಕ್ಕೆ ತಗಲುಬಹುದಾದ ಎಲ್ಲಾ ವೆಚ್ಚವನ್ನು ದರಪಟ್ಟಿ – ದಸ್ತಾವೇಜು ಸಲ್ಲಿಕೆದಾರರೇ ಭರಿಸತಕ್ಕದ್ದು ದರಪಟ್ಟಿ – ದಸ್ತಾವೇಜು ಸಲ್ಲಿಕೆ ಪ್ರಕ್ರಿಯೆ, ನಿರ್ವಹಣೆ ಹಾಗೂ ಫಲಿತಾಂಶದ ಪರಿಣಾಮಕ್ಕೆ ಸಂಬಂಧಿಸಿದಂತೆ, ಶಿವಮೊಗ್ಗ ಹಾಲು ಒಕ್ಕೂಟವು ಯಾವುದೇ ಕಾರಣಕ್ಕೂ ಜವಾಬ್ದಾರರಲ್ಲ.

**4.0 ಮಾರ್ಗ ಪರಿಶೀಲನೆಗೆ ಭೇಟಿ :**

4.1 ಗುತ್ತಿಗೆದಾರರು ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ವಿಶೇಷ ಬೇಡಿಕೆಯಿದ್ದಾಗ ಶಿವಮೊಗ್ಗ ಹಾಲು ಒಕ್ಕೂಟವು ಸೂಚಿಸಿದಂತೆ ಯಾವುದೇ ಹೆಚ್ಚಿನ ಮೊತ್ತ ಪಡೆಯದೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸರಬರಾಜು ಮಾಡಲು ಬದ್ಧರಿರಬೇಕು.

4.2 ದರಪಟ್ಟಿ – ದಸ್ತಾವೇಜು ಸಲ್ಲಿಸುವವರು, ತಾವು ಸಂಗ್ರಹಣೆ ಮಾಡಬೇಕಾಗಿರುವ ಮಾರ್ಗವನ್ನು ಪರಿಶೀಲಿಸಲು, ವೈಯಕ್ತಿಕ ಜವಾಬ್ದಾರಿಯ ಮೇಲೆ ಭೇಟಿ ನೀಡತಕ್ಕದ್ದು. ಅಧ್ಯಯನ ನಡೆಸತಕ್ಕದ್ದು, ದೊರೆಯುವ ಎಲ್ಲಾ ಮಾಹಿತಿಯನ್ನು ಗಮನದಲ್ಲಿರಿಸಿಕೊಂಡು ಅದರ ಆಧಾರದ ಮೇಲೆಯೇ ದರಪಟ್ಟಿ – ದಸ್ತಾವೇಜು ಸಿದ್ಧಪಡಿಸತಕ್ಕದ್ದು ಹಾಗೂ ಗುತ್ತಿಗೆದಾರನಾಗಿ ಪ್ರವೇಶ ಪಡೆಯತಕ್ಕದ್ದು.

**5.0 ದರಪಟ್ಟಿ – ದಸ್ತಾವೇಜು ನಿರ್ದೇಶನಗಳು :**

5.1 ದರಪಟ್ಟಿ – ದಸ್ತಾವೇಜುದಾರರು ತಾವು ಸಲ್ಲಿಸಬೇಕಾಗಿರುವ ದರಪಟ್ಟಿ – ದಸ್ತಾವೇಜು ಕುರಿತಂತೆ ನಿರ್ದೇಶಿಸಲಾಗಿರುವ ಎಲ್ಲಾ ನಿಯಮ ನಿಬಂಧನೆಗಳನ್ನು ಎಚ್ಚರಿಕೆಯಿಂದ ಪರೀಕ್ಷಿಸತಕ್ಕದ್ದು, ದರಪಟ್ಟಿ – ದಸ್ತಾವೇಜು ಸಲ್ಲಿಸಲು ಅಗತ್ಯವಾದ ಎಲ್ಲಾ ಅಧಿಕೃತ ಮಾಹಿತಿಗಳು, ದಾಖಲೆಗಳು ದರಪಟ್ಟಿ – ದಸ್ತಾವೇಜಿನೊಂದಿಗೆ ಲಗತ್ತಿಸತಕ್ಕದ್ದು ಹಾಗಲ್ಲದೆ ಪೂರ್ಣ ಮಾಹಿತಿ ನೀಡುವಲ್ಲಿ ವಿಫಲವಾದರೆ ದರಪಟ್ಟಿ – ದಸ್ತಾವೇಜನ್ನು ತಿರಸ್ಕರಿಸಲಾಗುತ್ತದೆ.

**6.0 ದರಪಟ್ಟಿ – ದಸ್ತಾವೇಜು ಸಲ್ಲಿಕೆ ಬೆಲೆ :**

6.1 ದರಪಟ್ಟಿ ಆಹ್ವಾನಿಸಿದ ಸಂದರ್ಭದಲ್ಲಿ ನಿಖರವಾಗಿ ಸೂಚಿಸಲಾಗಿರುವ ನಿಯಮ ನಿಬಂಧನೆಯಂತೆ ದರಪಟ್ಟಿ – ದಸ್ತಾವೇಜಿನ ಪರಿಶಿಷ್ಟ ಗುತ್ತಿಗೆಯ ಪೂರ್ಣ ಅವಧಿಗೆ ಎಂದಿರುವುದನ್ನು ದರಪಟ್ಟಿ – ದಸ್ತಾವೇಜುದಾರರು ಸ್ಪಷ್ಟ ಮಾತಿನಿಂದ ದರಪಟ್ಟಿ – ದಸ್ತಾವೇಜಿನಲ್ಲಿ ಖಚಿತವಾಗಿ ದಾಖಲಿಸತಕ್ಕದ್ದು, ಹಾಗಲ್ಲದೆ ಬೇರೆ ರೀತಿ ಇರತಕ್ಕದ್ದಲ್ಲ.

**7.0 ನಿಗದಿತ ದರ :**

7.1 ದಾಖಲೆಗೊಂಡ ದರ : ದರಪಟ್ಟಿ – ದಸ್ತಾವೇಜುದಾರನೊಂದಿಗೆ ಸಂಧಾನಗೊಂಡ ನಿಗದಿತ ದರ, ಗುತ್ತಿಗೆಯ ಪೂರ್ಣ ಅವಧಿಯಲ್ಲಿ ಜಾರಿಯಲ್ಲಿರತಕ್ಕದ್ದು, ಯಾವುದೇ ಕಾರಣಕ್ಕಾಗಿ ಯಾವುದೇ ಬಾಬ್ತಿನಲ್ಲಿ ಹೆಚ್ಚಳ ಆಗುವುದಕ್ಕೆ ಅವಕಾಶ ಇರುವುದಿಲ್ಲ ಹಾಗೂ ಅಂತಹ ವ್ಯತ್ಯಯವನ್ನು ಪರಿಗಣಸದೆ ಜೊತೆಗೆ ತಿರಸ್ಕರಿಸಲಾಗುವುದು. ಕೆಲವು ವಿಶೇಷ ಸಂದರ್ಭಗಳಲ್ಲಿ ನಿಗದಿತ ದರವನ್ನು ಪರಿಷ್ಕರಿಸಲು ಗುತ್ತಿಗೆದಾರರು ಮನವಿ ನೀಡಿದಲ್ಲಿ ಸದರಿ ಮನವಿಯನ್ನು ಸಂದರ್ಭಕ್ಕನುಗುಣವಾಗಿ ಪರಿಗಣಿಸಬಹುದಾಗಿದೆ. ಆದರೆ ಈ ವಿಷಯದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ನಿರ್ವಾಹಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.

7.2 ಗುತ್ತಿಗೆದಾರರು ನಮೂದಿಸುವ ದರವು ಎಲ್ಲಾ ತೆರಿಗೆಗಳನ್ನು ರಾಜ್ಯ/ಕೇಂದ್ರ ಸರ್ಕಾರದ ಟೋಲ್ ಫೀ (ರಾಜ್ಯ/ರಾಷ್ಟ್ರೀಯ ಹೆದ್ದಾರಿ ಶುಲ್ಕ), ಸೇವಾ ತೆರಿಗೆ, ವೃತ್ತಿ ತೆರಿಗೆ, ವ್ಯಾಟ್ ಮುಂತಾದವುಗಳನ್ನು ಒಳಗೊಂಡಿರಬೇಕು.

**8.0 ದರಪಟ್ಟಿ – ದಸ್ತಾವೇಜಿನ ಸಿಂಧುತ್ವ :**

8.1 ದರಪಟ್ಟಿ – ದಸ್ತಾವೇಜಿನ ಸಲ್ಲಿಕೆ, ಅಂಗೀಕಾರಗೊಂಡಿರುವ ರೀತ್ಯಾ ದರಪಟ್ಟಿ ತೆರೆಯುವ ಪ್ರಕ್ರಿಯೆಯ ದಿನಾಂಕದಿಂದ 60 ದಿನಗಳು ಮಾತ್ರ ಅದರ ಸಿಂಧುತ್ವ ಊರ್ಜಿತವಾಗಿರುತ್ತದೆ.

8.2 ಕೆಲವಾರು ಅನಿವಾರ್ಯ ಪರಿಸ್ಥಿತಿಯಲ್ಲಿ ಮಾತ್ರ ದರಪಟ್ಟಿ – ದಸ್ತಾವೇಜಿನ ಸಿಂಧುತ್ವ ಅವಧಿ ಮುಕ್ತಾಯಗೊಳ್ಳುವ ಮುನ್ನ ಶಿವಮೊಗ್ಗ ಹಾಲು ಒಕ್ಕೂಟವು ದರ ಪಟ್ಟಿದಾರರನ್ನು ನಿಗದಿತ ಸಿಂಧುತ್ವ ಅವಧಿಯನ್ನು ವಿಸ್ತರಿಸಬಹುದಾಗಿದೆ. ವಿಸ್ತರಣೆ ಕೋರಿಕೆಯನ್ನು ಬರವಣಿಗೆಯಲ್ಲಿ, ತಂತಿ ಸಂದೇಶದ ಮೂಲಕ ದೂರವಾಣಿ ಸಂಪರ್ಕದ ಮೂಲಕ ಮಾಡಬಹುದಾಗಿದೆ. ಆದರೆ ದರಪಟ್ಟಿ – ದಸ್ತಾವೇಜು ಸಲ್ಲಿಕೆ ಸಂದರ್ಭದಲ್ಲಿ ಒದಗಿಸಲಾಗಿದ್ದ ಆಧಾರ ನೀಡಿಕೆಯನ್ನು (ಭದ್ರತಾ ಠೇವಣಿಯನ್ನು) ಅದಕ್ಕನುಗುಣವಾಗಿ ವಿಸ್ತರಿಸಲು ಗುತ್ತಿಗೆದಾರರಿಗೆ ತಿಳಿಸಬಹುದಾಗಿರುತ್ತದೆ.

**9.0 ದರಪಟ್ಟಿ – ದಸ್ತಾವೇಜು ಸಲ್ಲಿಕೆಗೆ ಆಧಾರ ನೀಡಿಕೆ :**

9.1 ದರಪಟ್ಟಿದಾರ ದರಪಟ್ಟಿ – ದಸ್ತಾವೇಜು ಸಲ್ಲಿಕೆ ನಿಯಮದಡಿ ಸಾಗಾಣಿಕೆ ಕಾಮಗಾರಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ–ಪ್ರೋಕ್ಯೂರ್‌ಮೆಂಟ್ ನಿಯಮಾವಳಿಯಂತೆ ಆಧಾರ ನೀಡಿಕೆ (ಇ.ಎಂ.ಡಿ.) ಒದಗಿಸತಕ್ಕದ್ದು. ಕಾರುಗಳಿಗೆ ಮಾತ್ರ ಇ.ಎಂ.ಡಿ. ಮೊತ್ತ **ರೂ. 10,000.00 ಆಗಿರುತ್ತದೆ.** ಟ್ಯಾಂಕರ್‌ಗಳಿಗೆ ಅವುಗಳ ಮುಂದೆ ತಿಳಿಸಿದಂತೆ **ರೂ. 50,000.00,** ಇ.ಎಂ.ಡಿ.ಯನ್ನು ಇ–ಪ್ರೋಕ್ಯೂರ್‌ಮೆಂಟ್ ನಿಯಮಾವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಸಲ್ಲಿಸಿದ ಟೆಂಡರ್‌ಗಳನ್ನು ತಿರಸ್ಕರಿಸುವುದು.

9.2 ಆಧಾರ ನೀಡಿಕೆ ಮೊತ್ತವನ್ನು (ಇ.ಎಂ.ಡಿ.ಮೊತ್ತವನ್ನು) ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಿದಂತೆ ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿಯಂತೆ ಸಲ್ಲಿಸುವುದು.

9.3 ದರಪಟ್ಟಿ – ದಸ್ತಾವೇಜುದಾರ ಪ್ರತಿ ಮಾರ್ಗದ ಸಾಗಾಣಿಕೆ ಕಾಮಗಾರಿಗೂ ಪ್ರತ್ಯೇಕ ದರಪಟ್ಟಿ – ದಸ್ತಾವೇಜು ಸಲ್ಲಿಸತಕ್ಕದ್ದು.

9.4 ಯಾವುದೇ ದರಪಟ್ಟಿ ಸಲ್ಲಿಕೆಯ ಜೊತೆ ನಿಗಧಿತ ಆಧಾರ (ಇ.ಎಂ.ಡಿ.) ನೀಡಿಕೆ ಇರದಿದ್ದರೆ ಅಥವಾ ನಿಗದಿತ ಮೊತ್ತಕ್ಕಿಂತ ಕಡಿಮೆ ಇದ್ದರೆ ಅಂತಹ ದರಪಟ್ಟಿ – ದಸ್ತಾವೇಜನ್ನು ಶಿವಮೊಗ್ಗ ಹಾಲು ಒಕ್ಕೂಟವು ತಿರಸ್ಕರಿಸುತ್ತದೆ.

9.5 ಅಂಗೀಕಾರ ಆಗದ ದರಪಟ್ಟಿದಾರರಿಗೆ ಅವರು ಸಲ್ಲಿಸಿರುವ ಆಧಾರ (ಇ.ಎಂ.ಡಿ.) ಮೊತ್ತವನ್ನು ಆದಷ್ಟು ಶೀಘ್ರವಾಗಿ ಪ್ರಾಮಾಣಿಕವಾಗಿ ಹಿಂತಿರುಗಿಸಲಾಗುವುದು. ಅಂದರೆ ಅದು ನಮ್ಮ ದಸ್ತಾವೇಜಿನಲ್ಲಿ ಪ್ರಕಟಿಸಿರುವಂತೆ ದರಪಟ್ಟಿಯ ಸಿಂಧುತ್ವದ ನಿಗದಿತ ಅವಧಿಯ ನಂತರದ 30 ದಿನಗಳೊಳಗಾಗಿ

9.6 ಅಂಗೀಕಾರ ಆಗುವ ದರಪಟ್ಟಿದಾರರಿಗೆ, ಅವರು ಸಲ್ಲಿಸಿರುವ ಆಧಾರ ಮೊತ್ತವನ್ನು ಒಪ್ಪಂದಕ್ಕೆ ಸಹಿ ಹಾಕಿದಾಗ ಹಾಗೂ ಅಗತ್ಯವಾದ ಕಾರ್ಯ ನಿರ್ವಹಣಾ ಪ್ರಮಾಣ ಪತ್ರವನ್ನು ಒದಗಿಸಿದಾಗ ಹಿಂತಿರುಗಿಸಲಾಗುವುದು.

9.7 ದರಪಟ್ಟಿದಾರ ಸಲ್ಲಿಸಿರುವ ಇ.ಎಂ.ಡಿ./ಆಧಾರ ಮೊತ್ತಕ್ಕೆ ಬಡ್ಡಿಯನ್ನು ಶಿವಮೊಗ್ಗ ಹಾಲು ಒಕ್ಕೂಟ ಪಾವತಿಸುವುದಿಲ್ಲ.

10.0 ದರಪಟ್ಟಿದಾರ ಸಲ್ಲಿಸುವ ಇ.ಎಂ.ಡಿ./ಆಧಾರ ಮೊತ್ತವನ್ನು ಕೆಳಕಂಡ ಸಂಧರ್ಭಗಳಲ್ಲಿ ಮುಟ್ಟುಗೋಲು ಹಾಕಿಕೊಳ್ಳಬಹುದು.

10.1 ದರಪಟ್ಟಿ ಸಲ್ಲಿಕೆ ಸಿಂಧುತ್ವದ ಅವಧಿಯಲ್ಲಿ ತನ್ನ ದರಪಟ್ಟಿಯನ್ನು ಹಿಂದಕ್ಕೆ ಪಡೆದಿದ್ದೇ ಆದರೆ

10.2 ಅಂಗೀಕಾರ ಆದ ಕಾರಣ ದರಪಟ್ಟಿದಾರನು ನಿಗದಿತ ಕಾಲಾವಧಿಯಲ್ಲಿ

ಅ) ಠೇವಣಿ ಹಣ ಪಾವತಿಸಿ ಒಪ್ಪಂದಕ್ಕೆ ಸಹಿ ಮಾಡದೇ ಇದ್ದರೆ

**ಅಥವಾ**

ಈ) ಅಗತ್ಯ ಕಾರ್ಯ ನಿರ್ವಹಣಾ ಭರವಸಾ ಪತ್ರ ನೀಡದಿದ್ದರೆ ಅಥವಾ ನಿಗಧಿತ ಅವಧಿಯೊಳಗೆ ನಿಗಧಿಪಡಿಸಿದ ಸಾಮರ್ಥ್ಯದ ವಾಹನ ಒದಗಿಸದಿದ್ದರೆ,

**11.0 ದಸ್ತಾವೇಜು ಮಾದರಿ ಹಾಗೂ ದರಪಟ್ಟಿಗೆ ಸಹಿ ಮಾಡುವುದು :**

11.1 ದರಪಟ್ಟಿ ಸಲ್ಲಿಕೆಗೆ ಸಂಬಂಧಿಸಿದಂತೆ ತಾನು ಖರೀದಿಸಿದ ದಸ್ತಾವೇಜು ಮಾದರಿ, ಅದನ್ನು ಸಿದ್ದಪಡಿಸಿ ಅಧಿಕೃತ ಮೂಲ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವುದು.

11.2 ದರಪಟ್ಟಿ ಸಲ್ಲಿಕೆಗೆ ಸಂಬಂಧಿಸಿದ ದಸ್ತಾವೇಜಿನ ಎಲ್ಲಾ ಪುಟಗಳಲ್ಲಿ ಅಧಿಕೃತವಾಗಿ ನಾಮ ನಿರ್ದೇಶನಗೊಂಡ ಗುತ್ತಿಗೆ ವ್ಯಕ್ತಿ ಸಹಿ ಮಾಡತಕ್ಕದ್ದು, ದಸ್ತಾವೇಜಿನ ಎಲ್ಲಾ ಪುಟಗಳಲ್ಲಿ ಹಾಗೂ ತಿದ್ದುಪಡಿ ಮಾಡಿದ ಕಡೆಗಳಲ್ಲೆಲ್ಲಾ ಭರ್ತಿಮಾಡಿದ ವ್ಯಕ್ತಿ ಅಥವಾ ನಾಮನಿರ್ದೇಶನಗೊಂಡ ವ್ಯಕ್ತಿ ಆತನ ಹೆಸರಿನ ಅಧ್ಯ–ಅಕ್ಷರದಲ್ಲಿ ಸಹಿಯನ್ನು ಹೆಚ್ಚುವರಿಯಾಗಿ ಮಾಡತಕ್ಕದ್ದು.

11.3 ದರಪಟ್ಟಿಯ ಪೂರ್ಣ ದಸ್ತಾವೇಜಿನಲ್ಲಿ ಯಾವುದೇ ಬದಲಾವಣೆ ಮಾಡತಕ್ಕದ್ದಲ್ಲ. ಹಾಗೂ ಅಳಿಸತಕ್ಕದ್ದಲ್ಲ. ಆದರೆ ಶಿವಮೊಗ್ಗ ಹಾಲು ಒಕ್ಕೂಟ ನೀಡಬಹುದಾದ ಸೂಚನೆಗಳಿಗೆ ಈ ಕಟ್ಟುಪಾಡು ಅನ್ವಯಿಸುವುದಿಲ್ಲ ಅಥವಾ ದರಪಟ್ಟಿದಾರ ಅಕಸ್ಮಾತಾಗಿ ಮಾಡಿರಬಹುದಾದ ತಪ್ಪುಗಳನ್ನು ಅಗತ್ಯವಾಗಿ ಸರಿಪಡಿಸಬಹುದಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ದಸ್ತಾವೇಜಿನಲ್ಲಿ ಸಹಿ ಮಾಡುವ ಅಧಿಕೃತ ದರಪಟ್ಟಿದಾರ ತನ್ನ ಹೆಸರಿನ ಅಧ್ಯ–ಅಕ್ಷರಗಳ ಸಹಿ ಮಾಡತಕ್ಕದ್ದು, ಬರವಣಿಗೆಯ ಮೇಲೆ ಬರವಣಿಗೆ ಮಾಡಲು ಅನುಮತಿ ಇರುವುದಿಲ್ಲ.

**12.0 ಮೊಹರು ಮಾಡುವುದು ಹಾಗೂ ದರಪಟ್ಟಿ ಸಿದ್ದಪಡಿಸುವುದು :**

12.1 ದರಪಟ್ಟಿ ಸಲ್ಲಿಕೆದಾರ ಈ ಸಂಬಂಧದ ತಾಂತ್ರಿಕ ಮತ್ತು ವಾಣಿಜ್ಯ ದಸ್ತಾವೇಜನ್ನು ಪ್ರತ್ಯೇಕವಾಗಿ ಸಲ್ಲಿಸುವುದು.

12.2 ಹೊರ ಲಕೋಟೆಯನ್ನು ಮೇಲೆ ಸೂಚಿಸಿರುವಂತೆ ಮೊಹರು ಮಾಡದಿದ್ದರೆ, ಶಿವಮೊಗ್ಗ ಹಾಲು ಒಕ್ಕೂಟವು ಖಚಿತ ಮಾಹಿತಿ ಇಲ್ಲದೆ ಬೇರೆಲ್ಲಿಯೋ ತಪ್ಪಾಗಿ ಇರಿಸಲಾಗುವ ಹಾಗು ದರಪಟ್ಟಿ ತೆರೆಯಬೇಕಾದ ನಿಗದಿತ ದಿನಾಂಕಕ್ಕಿಂತಲೂ ಮುಂಚಿತವಾಗಿ ತೆರೆದ ತಪ್ಪುಗಳಿಗೆ ಹೊಣೆಯಾಗಲಾರದು. ಈ ರೀತಿ ದಿನಾಂಕಕ್ಕೆ ಮೊದಲೇ ತೆರೆಯಲಾಗುವ ದರಪಟ್ಟಿ ಲಕೋಟೆಯನ್ನು ಶಿವಮೊಗ್ಗ ಹಾಲು ಒಕ್ಕೂಟವು ತಿರಸ್ಕರಿಸಿ ದರಪಟ್ಟಿ ಸಲ್ಲಿಕೆದಾರನಿಗೆ ಹಿಂದಿರುಗಿಸಲಾಗುವುದು.

**13.0 ದರಪಟ್ಟಿ ಸಲ್ಲಿಕೆಗೆ ಅಂತಿಮ ದಿನಾಂಕ ಪ್ರಕಟಣೆ :**

13.1 ದರಪಟ್ಟಿ ಸಲ್ಲಿಕೆಗೆ ಆಹ್ವಾನಿಸಿದ ಸಂದರ್ಭ ನಿಗದಿಪಡಿಸಿದ ದಿನಾಂಕ ಹಾಗೂ ವೇಳೆಯೊಳಗೆ ಸಂಬಂಧಪಟ್ಟ ದಸ್ತಾವೇಜನ್ನು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ತಲುಪಿಸತಕ್ಕದ್ದು.

13.2 ಶಿವಮೊಗ್ಗ ಹಾಲು ಒಕ್ಕೂಟವು ತನ್ನ ವಿವೇಚನೆಗೆ ಅಗತ್ಯ ಕಂಡು ಬಂದರೆ ಟೆಂಡರ್‌ನಲ್ಲಿ ಪ್ರಕಟಿಸಿದ ಅಂತಿಮ ದಿನಾಂಕವನ್ನು ಮುಂದೂಡಬಹುದಾಗಿರುತ್ತದೆ. ನಂತರ ತಿದ್ದುಪಡಿ ದಿನಾಂಕವನ್ನು ಪ್ರಕಟಿಸಲು ಶಿವಮೊಗ್ಗ ಹಾಲು ಒಕ್ಕೂಟವು ಹಾಗೂ ದರಪಟ್ಟಿದಾರರ ನಡುವಣ ತನ್ನ ಹಕ್ಕು ಹಾಗೂ ಬಾಧ್ಯತೆಯಿಂದ ಹಿಂದೆ ಪ್ರಕಟಿಸಿದ ಮೂಲ ಕೊನೆಯ ದಿನಾಂಕದ ಸಿಂಧುತ್ವವನ್ನು ರದ್ದುಗೊಳಿಸಿ, ಮುಂದೂಡಿದ ಹೊಸ ಅಂತಿಮ ದಿನಾಂಕವನ್ನು ಪ್ರಕಟಿಸಿ ಸಿಂಧುಗೊಳಿಸಬಹುದಾಗಿರುತ್ತದೆ.

**14.0 ತಡವಾಗಿ ಸಲ್ಲಿಕೆಯಾಗುವ ದರಪಟ್ಟಿ ದಸ್ತಾವೇಜುಗಳು :**

14.1 ಶಿವಮೊಗ್ಗ ಹಾಲು ಒಕ್ಕೂಟವು ಅಂತಿಮ ದಿನಾಂಕ ಹಾಗೂ ವೇಳೆ ಮೀರಿ ತಲುಪುವ ಯಾವುದೇ ದರಪಟ್ಟಿ ದಸ್ತಾವೇಜುಗಳನ್ನು ದರಪಟ್ಟಿ ಸಲ್ಲಿಕೆಗೆ ಆಹ್ವಾನಿಸಿದ ಸಂದರ್ಭದಲ್ಲಿ ಪ್ರಕಟಿಸಲಾದ ಅಂತಿಮ ದಿನಾಂಕ ಹಾಗೂ ವೇಳೆಯನ್ನು ಪರಿಗಣಿಸಿ ಹಾಗೂ ಕಾನೂನು ನಿಯಮದ ಹಿನ್ನೆಲೆಯಲ್ಲಿ ಅವುಗಳನ್ನು ತೆರೆಯದೆಯೇ, ದರಪಟ್ಟಿದಾರರಿಗೆ ಹಿಂದಿರುಗಿಸಲಾಗುವುದು.

**15.0 ದರಪಟ್ಟಿ ದಸ್ತಾವೇಜು ತೆರೆಯುವ ಕ್ರಮ :**

15.1 ಶಿವಮೊಗ್ಗ ಹಾಲು ಒಕ್ಕೂಟವು ದರಪಟ್ಟಿ ದಸ್ತಾವೇಜು ಸಲ್ಲಿಸಿದ ಎಲ್ಲಾ ದರಪಟ್ಟಿದಾರರ ಪ್ರತಿನಿಧಿಗಳ ಸಮ್ಮುಖದಲ್ಲಿ ಮೊಹರುಮಾಡಿದ ದರಪಟ್ಟಿ ದಸ್ತಾವೇಜಿನ ಲಕೋಟೆಗಳನ್ನು ತೆರೆಯುತ್ತದೆ. ಅದೂ ಕೂಡ ದರಪಟ್ಟಿದಾರರು ಶಿವಮೊಗ್ಗ ಹಾಲು ಒಕ್ಕೂಟದೊಂದಿಗೆ ಸಂಪರ್ಕ ಏರ್ಪಡಿಸಿಕೊಂಡು ಆಯ್ಕೆ ಮಾಡಿಕೊಳ್ಳುವ ಕಛೇರಿಯ ವೇಳೆಯಲ್ಲಿಯೇ ಜೊತೆಗೆ ದರಪಟ್ಟಿ ಸಲ್ಲಿಕೆಗೆ ಆಹ್ವಾನಿಸಿದ ಸಂದರ್ಭದಲ್ಲಿ ಸೂಚಿಸಲಾಗಿದ್ದ ಅಂತಿಮ ದಿನಾಂಕ ಹಾಗೂ ವೇಳೆಗೆ ಅನುಗುಣವಾಗಿ ಈ ಪ್ರಕ್ರಿಯೆ ನಡೆಯುತ್ತದೆ. ಹಾಜರಾದ ದರಪಟ್ಟಿ ಸಲ್ಲಿಕೆದಾರರು ಅಥವಾ ಅವರ ಪ್ರತಿನಿಧಿಗಳು ಕಛೇರಿಯ ಕಡತದಲ್ಲಿ ತಮ್ಮ ಹಾಜರಾತಿಯನ್ನು ದೃಢೀಕರಿಸಲು ಹಾಜರಾತಿಗೆ ಸಹಿ ಹಾಕಬೇಕಾಗುತ್ತದೆ.

**16.0 ಜವಾಬ್ದಾರಿಯುತವಾಗಿ ಸಲ್ಲಿಕೆಯಾಗಿರುವ ಕುರಿತು ನಿರ್ಧಾರ :**

16.1 ದರಪಟ್ಟಿ ದಸ್ತಾವೇಜಿನ ವಿವರ ಮೌಲ್ಯಮಾಪನಕ್ಕೆ ಪೂರ್ವಭಾವಿಯಾಗಿ ಪ್ರತಿಯೊಂದು ದರಪಟ್ಟಿ ದಸ್ತಾವೇಜುಗಳು ಎಲ್ಲಾ ರೀತಿಯಿಂದಲೂ ಅಗತ್ಯಕ್ಕೆ ತಕ್ಕಂತೆ ಜವಾಬ್ದಾರಿಯುತವಾಗಿ ಸಲ್ಲಿಕೆ ಆಗಿದೆಯೇ ಎಂದು ನಿರ್ಧಾರ ಕೈಗೊಳ್ಳಲು ಶಿವಮೊಗ್ಗ ಹಾಲು ಒಕ್ಕೂಟವು ಮುಂದಾಗುತ್ತದೆ.

16.2 ನಿಯಮದ ರೀತ್ಯಾ ಇಂತಹ ನಿರ್ಧಾರ ಕೈಗೊಳ್ಳಲು ಎಲ್ಲಾ ರೀತಿಯಿಂದಲೂ ಜವಾಬ್ದಾರಿಯುತವಾಗಿ ಸಲ್ಲಿಕೆಯಾಗಿರುವ ದರಪಟ್ಟಿ ದಸ್ತಾವೇಜು ಎಂದು ಪರಿಗಣಿತವಾಗಲು ಅದು ವಿಧಿಸಲಾಗಿರುವ ನೀತಿ, ನಿಯಮಗಳಿಗೆ ವಿವರ ಮಾಹಿತಿಗೆ ಬದ್ಧವಾಗಿದ್ದು, ಯಾವುದೇ ರೀತಿಯಿಂದಲೂ ವ್ಯತ್ಯಯಗೊಳ್ಳದ ಹಾಗೂ ಕಾಯ್ದಿರಿಸಿದ ರೀತಿಯದ್ದಾಗಿರಬೇಕು. ವ್ಯತ್ಯಯ ಅಥವಾ ಕಾಯ್ದಿರಿಸುವಿಕೆಯಿಂದಾಗಿ ಅದರ ಆಶಯ ಅಥವಾ ಗುತ್ತಿಗೆಯ ಕಾರ್ಯವೈಖರಿಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಅಥವಾ ಕೆಲದೃಷ್ಟಿಯ ಇತಿಮಿತಿಗೊಳ್ಳುತ್ತದೆ. ಜೊತೆಗೆ ದರಪಟ್ಟಿ ದಸ್ತಾವೇಜಿನೊಂದಿಗೆ ಅಸಂಗತಗೊಳ್ಳುತ್ತದೆ. ಶಿವಮೊಗ್ಗ ಹಾಲು ಒಕ್ಕೂಟವು ಹಕ್ಕು ಅಥವಾ ದರಪಟ್ಟಿದಾರರ ಗುತ್ತಿಗೆ ಬಾಧ್ಯತೆ ಇವುಗಳ ಸುಧಾರಣೆ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ವ್ಯತ್ಯಯ ಹಾಗೂ ಕಾಯ್ದಿರಿಸುವಿಕೆ ಇತರೆ ಸ್ಪರ್ಧಾತ್ಮಕ ದರಪಟ್ಟಿದಾರರ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಹಾಗಾಗಿ ಎಲ್ಲಾ ರೀತಿಯಿಂದಲೂ ಜವಾಬ್ದಾರಿಯುತ ದರಪಟ್ಟಿ ದಸ್ತಾವೇಜಿನ ಸಲ್ಲಿಕೆ ಆಗಬೇಕಾಗಿದೆ.

16.3 ದರಪಟ್ಟಿ ದಸ್ತಾವೇಜಿನ ಅಗತ್ಯಕ್ಕೆ ಅನುಗುಣವಾಗಿ ಜವಾಬ್ದಾರಿಯುತ ಪ್ರತಿಕ್ರಿಯೆ ಇಲ್ಲವಾದಲ್ಲಿ ಅಂತಹವನ್ನು ಶಿವಮೊಗ್ಗ ಹಾಲು ಒಕ್ಕೂಟವು ತಿರಸ್ಕರಿಸುತ್ತದೆ. ಅನಧಿಕೃತ ವ್ಯತ್ಯಯ ಅಥವಾ ಕಾಯ್ದಿರಿಸುವಿಕೆಯನ್ನು ಸರಿಪಡಿಸಲು ಹಿಂತಿರುಗಿ ಪಡೆದುದ್ದನ್ನು ಮತ್ತೆ ಜವಾಬ್ದಾರಿಯುತಗೊಳಿಸಲಾಗುವುದಿಲ್ಲ.

17.0 ಶಿವಮೊಗ್ಗ ಹಾಲು ಒಕ್ಕೂಟ ಯಾವುದೇ ದರಪಟ್ಟಿ ದಸ್ತಾವೇಜನ್ನು ಸ್ವೀಕರಿಸುವುದಕ್ಕೂ ತಿರಸ್ಕರಿಸುವುದಕ್ಕೂ ಅಥವಾ ಎಲ್ಲವನ್ನು ಸಾರಾ ಸಗಟಾಗಿ ತಿರಸ್ಕರಿಸುವುದಕ್ಕೂ ಹಕ್ಕುಳ್ಳದ್ದಾಗಿರುತ್ತದೆ.

17.1 ಮೇಲಿನ ವಿಷಯಗಳನ್ನು ಪೂರೈಸಲಾಗದ ದಸ್ತಾವೇಜನ್ನು ಯಾವುದೇ ಸಮಯದಲ್ಲಿ ಗುತ್ತಿಗೆ ನೀಡಿಕೆಗೆ ಪೂರ್ವಭಾವಿಯಾಗಿ ತಿರಸ್ಕರಿಸುವ ಅಥವಾ ಸ್ವೀಕರಿಸುವ, ಇಲ್ಲವೇ ಪ್ರಕ್ರಿಯೇಯನ್ನೇ ರದ್ದುಪಡಿಸುವ ಹಾಗೂ ಸಾರಾಸಗಟಾಗಿ ಎಲ್ಲವನ್ನೂ ತಿರಸ್ಕರಿಸುವ ಹಕ್ಕನ್ನು ಶಿವಮೊಗ್ಗ ಹಾಲು ಒಕ್ಕೂಟ ಕಾಯ್ದಿರಿಸಿಕೊಂಡಿದೆ. ಪರಿಣಾಮಕ್ಕೆ ಗುರಿಯಾಗುವ ದರಪಟ್ಟಿದಾರರಿಗೆ ಯಾವುದೇ ರೀತಿಯ ಉಪಶಮನಕ್ಕೂ ಬದ್ಧವಾಗದೆ ಮಾಹಿತಿಯನ್ನು ನೀಡಬೇಕಾದ ಹೊಣೆಗಾರಿಕೆಯು ಇಲ್ಲದೇ ಕ್ರಮ ತೆಗೆದುಕೊಳ್ಳಲು ಶಿವಮೊಗ್ಗ ಹಾಲು ಒಕ್ಕೂಟ ಹಕ್ಕುಳ್ಳದ್ದಾಗಿದೆ.

**18.0 ಗುತ್ತಿಗೆ ನೀಡಿಕೆ :**

18.1 ದರಪಟ್ಟಿ ದಸ್ತಾವೇಜು ಹಲವು ದೃಷ್ಟಿಯಿಂದ ಜವಾಬ್ದಾರಿಯುತವಾದುದು ಎಂದು ಪರಿಗಣಿತವಾಗಿ ಕನಿಷ್ಟ ದರವನ್ನು ದರಪಟ್ಟಿಯಲ್ಲಾಗಲೀ ಅಥವಾ ಸಂಧಾನದಲ್ಲಾಗಲೀ ಸೂಚಿಸಿರುವುದರಿಂದ ಶಿವಮೊಗ್ಗ ಹಾಲು ಒಕ್ಕೂಟವು ನಿಯಮ 15 ರ ಅಡಿಯಲ್ಲಿ ದರಪಟ್ಟಿದಾರನಿಗೆ ಗುತ್ತಿಗೆ ನೀಡಬಹುದಾಗಿರುತ್ತದೆ. ಹಲವು ದೃಷ್ಟಿಯಿಂದ ಜವಾಬ್ದಾರಿಯುತವಾದವು ಎಂದು ಪರಿಗಣಿತವಾದ ದರಪಟ್ಟಿ ದಸ್ತಾವೇಜಿನ ತೌಲನಿಕ ತಃಖ್ತೆ ಮೂಲಕ ಮೌಲ್ಯಮಾಪನ ಮಾಡಲಾಗದೆ ಹಾಗೂ ಗುತ್ತಿಗೆ ಕಾಮಗಾರಿಯನ್ನು ಪರಿಣಾಮಯುತವಾಗಿ ನಿರ್ವಹಿಸಬಲ್ಲೆ ಎಂಬ ಸಾಮರ್ಥ್ಯ ಹಾಗೂ ಸಂಪನ್ಮೂಲದ ಬಗೆಗೆ ದೃಢೀಕರಣ ಒದಗಿಸಿದರೆ ಗುತ್ತಿಗೆಯನ್ನು ನೀಡಬಹುದಾಗಿರುತ್ತದೆ.

18.2 ಶಿವಮೊಗ್ಗ ಹಾಲು ಒಕ್ಕೂಟವು ನಾಮಮಾತ್ರ ಸದಸ್ಯತ್ವಕ್ಕಾಗಿ ನಿಗದಿತ ಮೊತ್ತ ಪಾವತಿಸಿದ ಅವರು / ಅವಳು ಪಡೆದುಕೊಂಡ ನಂತರ ಗುತ್ತಿಗೆಯನ್ನು ನೀಡಬಹುದಾಗಿರುತ್ತದೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

# ಅನುಬಂಧ – ಸಿ

1) ಕ್ರ.ಸಂ. 1 ರಿಂದ 4 ರವರೆಗಿನ ಮಾರ್ಗಗಳಿಗೆ ಅವುಗಳ ಮುಂದೆ ತೋರಿಸಿರುವಂತೆ ಇ.ಎಂ.ಡಿ.ಯನ್ನು ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿಯಂತೆ ಪಾವತಿಸುವುದು.
2) ಕ್ರ.ಸಂ. 1 ರಿಂದ 4 ರವರೆಗಿನ ಮಾರ್ಗದಲ್ಲಿ ಯಾವುದೇ ಮಾರ್ಗಕ್ಕೆ ಟೆಂಡರ್ ಪಡೆದರು ಮಾರ್ಗದ ಮುಂದೆ ಸೂಚಿಸಿರುವಂತೆ ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ನಗದು/ಎಫ್.ಡಿ ಭದ್ರತಾ ಠೇವಣಿಯನ್ನು ನೀಡುವುದು.

**ವಿಶೇಷ ಸೂಚನೆ :**

1) ಟೆಂಡರ್‌ನಲ್ಲಿ ಪ್ರಕಟಿಸಿದ ಮಾದರಿಯ/ಸಾಮರ್ಥ್ಯದ ವಾಹನವುಳ್ಳವರು ಮಾತ್ರ ಪ್ರತಿ ಟೆಂಡರ್ ಅರ್ಜಿ ಜೊತೆಯಲ್ಲಿ ವಾಹನವಾರು ದಾಖಲಾತಿಗಳನ್ನು ಲಗತ್ತಿಸಿರಬೇಕು.

2) ಟೆಂಡರ್‌ನಲ್ಲಿ ಸೂಚಿಸಿರುವ ಮಾರ್ಗ ಸಂಖ್ಯೆ 01 ರಿಂದ 03 ರ ವರೆಗಿನ ಮಾರ್ಗಗಳಿಗೆ ಹಾಲನ್ನು ಸಾಗಿಸುವ ಸಾಮರ್ಥ್ಯವುಳ್ಳ ಇನ್ಸುಲೇಟೆಡ್ ರೋಡ್ ಮಿಲ್ಕ್ ಟ್ಯಾಂಕರ್ ವಾಹನಗಳು ಇರಬೇಕು. ಇನ್ಸುಲೇಟೆಡ್ ಕಡ್ಡಾಯವಾಗಿವಾಗಿರುತ್ತದೆ ಇನ್ಸುಲೇಟೆಡ್‌ನ ಮಾದರಿ ಲಗತ್ತಿಸಿದೆ.

3) ಟೆಂಡರ್‌ನಲ್ಲಿ ಸೂಚಿಸುವ ಮಾರ್ಗ ಸಂಖ್ಯೆ 01 ರಿಂದ 03 ರ ಮಾರ್ಗಗಳಿಗೆ ಇನ್ಸುಲೇಟೆಡ್‌ನಿಂದ ಬಾಡಿಯನ್ನು ಮುಚ್ಚಿದ, ಬಾಡಿ ಕಟ್ಟಿದ ವಾಹನ ಹೊಂದಿರಬೇಕು.

4) ಗುತ್ತಿಗೆ ವರ್ಗಾವಣೆಗೆ ಅವಕಾಶವಿರುವುದಿಲ್ಲ. ಆದರೂ ಸಹ ಅನಿವಾರ್ಯ ಸಂದರ್ಭದಲ್ಲಿ ಆದೇಶ ಪಡೆದು ವಾಹನ ಓಡಿಸಿದ ಕನಿಷ್ಟ ಮೂರು ತಿಂಗಳ ನಂತರ ನಿಯಾಮಾನುಸಾರ ವರ್ಗಾವಣೆ ಶುಲ್ಕ ಪಾವತಿಸಿದಲ್ಲಿ ಒಂದು ಬಾರಿ ಮಾತ್ರ ಮಾಡಲಾಗುವುದು.

5) ಕ್ಯಾಷ್ ಅಂಡ್ ಕ್ಯಾರಿ ಮಾರ್ಗಗಳಿಗೆ ಮಾರಾಟದ ನಗದು ಹಣ/ಧನಾದೇಶ ಇತ್ಯಾದಿಗಳನ್ನು ಆಯಾ ದಿನವೇ ಶಿವಮೊಗ್ಗ ಡೈರಿ ಜಮಾ ಮಾಡುವ ಅಥವಾ ಒಪ್ಪಿಸುವ ಹೊಣೆಗಾರಿಕೆ ಇರುತ್ತದೆ.

6) ಈ ಟೆಂಡರ್‌ನಲ್ಲಿ ಒಂದು ಮಾರ್ಗದ ಗುತ್ತಿಗೆಯಲ್ಲಿ, ಭಾಗವಹಿಸುವ ವಾಹನ ಇನ್ನೊಂದು ಮಾರ್ಗದ ಗುತ್ತಿಗೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ ಹಾಗೂ ಹಾಲಿ ಇರುವ ಗುತ್ತಿಗೆದಾರರು ಇನ್ನೂ ಟೆಂಡರ್ ಅವಧಿ ಮುಗಿಯದೇ ಇರುವ ಮಾರ್ಗಗಳಿಗೆ ನೀಡಿರುವ ವಾಹನ ದಾಖಲಾತಿಗಳನ್ನು ಈ ಟೆಂಡರಿಗೆ ಸಲ್ಲಿಸುವಂತಿಲ್ಲ.

7) ಕ್ರ.ಸಂ. 01 ರಿಂದ 04 ರವರೆಗಿನ ಹಾಲು ಬಿ.ಎಂ.ಸಿ. ಶೇಖರಣ ಮಾರ್ಗಗಳಿಗೆ 2 ವರ್ಷದ ಅವಧಿಗೆ ಅಥವಾ ಹಾಲು ಕಡಿಮೆಯಾಗುವವರೆಗೆ ಯಾವುದು ಮೊದಲೊ ಅಲ್ಲಿಯವರೆಗೆ ಮಾತ್ರ ವಾಹನ ಒದಗಿಸಲು ಟೆಂಡರ್ ಕರೆಯಲಾಗಿದೆ.

ಈ ಮೇಲೆ ತಿಳಿಸಿರುವಂತೆ ಟೆಂಡರ್ ಒಪ್ಪಿಗೆಯಾದಲ್ಲಿ ಆಯಾ ಮಾರ್ಗದ ಮುಂದೆ ಸೂಚಿಸಿದ ಭದ್ರತಾ ಠೇವಣಿ ನೀಡಲು ಒಪ್ಪಿರುತ್ತೇನೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**

(ದಪ್ಪ ಅಕ್ಷರಗಳಲ್ಲಿ)

## ಅನುಬಂಧ – ಡಿ

### 1.0 ಗುತ್ತಿಗೆ ನಿಯಮ ನಿಬಂಧನೆಗಳು :

ಗುತ್ತಿಗೆದಾರರು ಸಾಗಾಣಿಕೆದಾರರು ಅವರಿಗೆ ಈ ಉದ್ದೇಶದಿಂದ ಒಪ್ಪಿಸಿರುವ ನಿಗದಿತ ಮಾರ್ಗಗಳಲ್ಲಿ ಹಾಲನ್ನು ಸ್ಥಳಕ್ಕೆ ಬೆಳಿಗ್ಗೆ ಹಾಗೂ ಮಧ್ಯಾಹ್ನ ಎರಡೂ ವೇಳೆ ಅಥವಾ ಡೇರಿ ನಿಗದಿಪಡಿಸಿರುವ ವೇಳಾಪಟ್ಟಿಯಂತೆ ಸಾಗಾಣಿಕೆ ಮಾಡತಕ್ಕದ್ದು.

1. ಅ) ಬಿ.ಎಂ.ಸಿ.ಯ ಕಟ್ಟೆಯಿಂದ ಹಾಲು ಪಡೆಯುವ ಸಂದರ್ಭದಲ್ಲಿ ಗುತ್ತಿಗೆದಾರರು ಅಥವಾ ಗುತ್ತಿಗೆದಾರ ಅಧಿಕೃತವಾಗಿ ನೇಮಿಸಿಕೊಳ್ಳುವ ಪ್ರತಿನಿಧಿಗಳು, ಹಾಳಾದ ಹಾಲನ್ನು ಲೋಡು ಮಾಡಿಕೊಳ್ಳಬಾರದು.

2. ದರಪಟ್ಟಿ , ದಸ್ತಾವೇಜು, ಅಂಗೀಕಾರ ಆದ ಮೇಲೆ ಗುತ್ತಿಗೆದಾರರು ಆಧಾರದ ಮೊತ್ತವಾಗಿ ಭದ್ರತಾ ಠೇವಣಿ ಇಡು ಹಣವನ್ನು ಆಯಾ ಮಾರ್ಗಗಳಿಗೆ ಸೂಚಿಸಿರುವಂತೆ ಪಾವತಿಸತಕ್ಕದ್ದು. ಈ ರೀತಿಯ ಆಧಾರ ಮೊತ್ತವನ್ನು ಸಂಸ್ಥೆಯಲ್ಲಿ ನಗದು ರೂಪದಲ್ಲಿ/ ಎಫ್.ಡಿ. ಇರಿಸತಕ್ಕದ್ದು ಮತ್ತು ಈ ಮೊತ್ತಕ್ಕೆ ಬಡ್ಡಿ ನೀಡಲಾಗುವುದಿಲ್ಲ. ಗುತ್ತಿಗೆ ಅವಧಿ ಮುಕ್ತಾಯದ ನಂತರ ಸಂಸ್ಥೆಗೆ ಯಾವುದೇ ಬಾಕಿ ಇಲ್ಲವೆಂದು ದೃಢಪಟ್ಟನಂತರ ಈ ಹಣವನ್ನು ಹಿಂತಿರುಗಿಸಲಾಗುವುದು. ಗುತ್ತಿಗೆದಾರರು ತಮ್ಮ ಕರ್ತವ್ಯದಿಂದ ವಿಮುಖನಾದರೆ ಅಂತಹವರು ಡೈರಿಯಲ್ಲಿಟ್ಟಿರುವ ಇಡು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

3. ಗುತ್ತಿಗೆದಾರ ತನಗೆ ದತ್ತವಾದ ಗುತ್ತಿಗೆಯನ್ನು ಮತ್ತೊಬ್ಬರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ. ಆದರೂ ಸಹ ಅನಿವಾರ್ಯ ಸಂದರ್ಭದಲ್ಲಿ ಆದೇಶ ಪಡೆದು ವಾಹನ ಓಡಿಸಿದ ಕನಿಷ್ಟ ಮೂರು ತಿಂಗಳ ನಂತರ ನಿಯಾಮಾನುಸಾರ ವರ್ಗಾವಣೆ ಶುಲ್ಕ ಪಾವತಿಸಿದಲ್ಲಿ ಒಂದು ಬಾರಿ ಮಾತ್ರ ವರ್ಗಾವಣೆ ಮಾಡಲಾಗುವುದು.

4. ಶಿವಮೊಗ್ಗ ಹಾಲು ಒಕ್ಕೂಟವು ತನ್ನ ಅಂತಿಮ ಆದೇಶದಲ್ಲಿ ಸೂಚಿತ ದಿನಾಂಕದಿಂದು ಆರಂಭಗೊಂಡು ಒಂದು/ಎರಡು ವರ್ಷಗಳ ಅವಧಿಗೆ ಸಾಗಾಣಿಕೆ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು. ಅಥವಾ ಡೇರಿಯು ತನ್ನ ವಿವೇಚನೆಗೆ ಸರಿಯೆಂದು ಕಂಡುಬಂದಲ್ಲಿ ಎಂಥದೇ ಸಂದರ್ಭದಲ್ಲಿ ಯಾವುದೇ ಕಾರಣ ನೀಡದೇ ಸಾಗಾಣಿಕೆ ಕಾಮಗಾರಿಯ ಅವಧಿಯನ್ನು ಕಡಿಮೆ ಅವಧಿಗೆ ನಿಗದಿಪಡಿಸಲು ಅಧಿಕಾರ ಉಳ್ಳದ್ದಾಗಿರುತ್ತದೆ.

5. ಸಾಗಾಣಿಕೆ ಕಾಮಗಾರಿಯಲ್ಲಿ ವಿಮುಖನಾದ ಗುತ್ತಿಗೆದಾರನನ್ನು ಅವಧಿಗೆ ಮುಂಚೆಯೇ ವಜಾ ಮಾಡಿದರೆ ಅಂತಹವನು ಇರಿಸಿರುವ ಇಡು ಹಣವನ್ನು ಭಾಗಶಃ ಅಥವಾ ಪೂರ್ಣ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಯಾವುದು ಸರಿಯೆಂದು ಶಿವಮೊಗ್ಗ ಹಾಲು ಒಕ್ಕೂಟವು ನಿರ್ಧರಿಸುತ್ತದೆ.

6. ಗುತ್ತಿಗೆದಾರರಿಗೆ ವಹಿಸಿರುವ ಮಾರ್ಗಗಳಲ್ಲಿ ಕೆಲವು ಗುತ್ತಿಗೆದಾರರ ಅಥವಾ ಎಲ್ಲಾ ಗುತ್ತಿಗೆದಾರರ ಸಾಗಾಣಿಕೆ ಮಾರ್ಗಗಳನ್ನು ಯಾವುದೇ ಕಾರಣ ನೀಡದೆ ಎಷ್ಟೇ ಅವಧಿಯವರೆಗೆ ಶಿವಮೊಗ್ಗ ಹಾಲು ಒಕ್ಕೂಟವು ತನ್ನ ವಿವೇಚನೆಗೆ ಸರಿಯೆಂದು ಕಂಡುಬಂದರೆ ಅಮಾನತುಗೊಳಿಸಬಹುದಾಗಿರುತ್ತದೆ.

7. ಗುತ್ತಿಗೆದಾರರಿಗೆ ವಹಿಸಿರುವ ಮಾರ್ಗಗಳಲ್ಲಿ ಕೆಲವು ಗುತ್ತಿಗೆದಾರರ ಅಥವಾ ಎಲ್ಲಾ ಗುತ್ತಿಗೆದಾರರ ಅಂಗೀಕಾರ ಪಡೆದ ಸಾಗಾಣಿಕೆ ಅವಧಿಯಲ್ಲಿ ಯಾವ ಸಮಯದಲ್ಲಿ ಬೇಕಾದರೂ ಅಮಾನತು ಆಜ್ಞೆಯನ್ನು ಶಿವಮೊಗ್ಗ ಹಾಲು ಒಕ್ಕೂಟ ಹಿಂದಕ್ಕೆ ಪಡೆಯಲು ಅಧಿಕಾರ ಉಳದ್ದಾಗಿರುತ್ತದೆ.

8. ಶಿವಮೊಗ್ಗ ಹಾಲು ಒಕ್ಕೂಟ ಸೂಚಿಸುವ ನಿರ್ದಿಷ್ಟ ದಿನಾಂಕದಿಂದ ಬಿ.ಎಂ.ಸಿ. ಮಾರ್ಗದಲ್ಲಿ ಕೆಲವು ಅಥವಾ ಎಲ್ಲಾ ಮಾರ್ಗದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ಸೂಚಿಸುವ ಗುತ್ತಿಗೆ ದರದನ್ವಯ ಸಾಗಾಣಿಕೆ ಕಾಮಗಾರಿಯನ್ನು ಪುನಾರಂಭಿಸಬಹುದಾಗಿರುತ್ತದೆ.

9. ಸಾಗಾಣಿಕೆ ಕಾಮಗಾರಿಯನ್ನು ಅಮಾನತುಗೊಳಿಸಿದ ಕಾರಣಕ್ಕಾಗಿ ಗುತ್ತಿಗೆದಾರರಿಗೆ ಪರಿಹಾರ ಧನವನ್ನು ನೀಡಲಾಗುವುದಿಲ್ಲ.

10. ಒಪ್ಪಂದವಾದ ಅರ್ಹ ಗುತ್ತಿಗೆ ಅವಧಿ ಮುಕ್ತಾಯವಾದ ಮೇಲೂ 3 ತಿಂಗಳಿಗೆ ಮೀರದಂತೆ ಗುತ್ತಿಗೆ ಅವಧಿಯನ್ನು ವಿಸ್ತರಿಸಲು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಅವಕಾಶವಿರುತ್ತದೆ.

11. ಗುತ್ತಿಗೆದಾರ ತನ್ನ ಸ್ವಂತ ವಾಹನವನ್ನು ಸಾಗಾಣಿಕೆ ಕಾಮಗಾರಿಗೆ ಓಡಿಸತಕ್ಕದ್ದು, ಹಾಗೂ ವಾಹನಕ್ಕೆ ಸಂಬಂಧಪಟ್ಟ ನೋಂದಣಿ, ನೋಂದಾವಣೆ ಪ್ರಮಾಣ ಪತ್ರ ತೆರಿಗೆ ಪಾವತಿ ರಶೀದಿ, ವಿಮಾ ಪ್ರಮಾಣ ಪತ್ರ ಹಾಗೂ ಇತರ ಎಲ್ಲಾ ಅಗತ್ಯ ಪ್ರಮಾಣ ಪತ್ರಗಳೂ, ಕಾಗದ ಪತ್ರಗಳ ಮೂಲ ಪ್ರತಿಯನ್ನು ಶಿವಮೊಗ್ಗ ಹಾಲು ಒಕ್ಕೂಟದ ನಿರ್ವಾಹಕ ನಿರ್ದೇಶಕರ ಸಮ್ಮುಖದಲ್ಲಿ ಹಾಜರು ಪಡಿಸಿ ಸ್ವಂತ ವಾಹನವೆಂದು ದೃಡಪಡಿಸಿ ಸಾಗಾಣಿಕೆ ಕಾಮಗಾರಿಯ ಗುತ್ತಿಗೆ ಕಾರ್ಯಕ್ಕೆ ಪ್ರವೇಶಿಸಬೇಕಾಗುತ್ತದೆ ಮಾರ್ಗದಲ್ಲಿ ಸಮರ್ಥವಾಗಿ ಓಡಬಲ್ಲದೆಂದು ಹಾಲು ಹಾಲಿನ ಉತ್ಪನ್ನಗಳನ್ನು ಸಾಗಿಸಬಲ್ಲದೆಂದು ದೃಢಪಡಿಸಬೇಕಾಗುತ್ತದೆ. ಶಿವಮೊಗ್ಗ ಹಾಲು ಒಕ್ಕೂಟವು ಕೆಲ ವಾಹನಗಳು ಸಮರ್ಥವಲ್ಲವೆಂದು ಪರಿಗಣಿಸಿದರೆ ಅಂತಹ ವಾಹನಗಳನ್ನು ಬದಲಿಸುತ್ತೇನೆಂದು ಪ್ರಮಾಣಿಸಿದ ನಂತರ ಗುತ್ತಿಗೆ ಕಾರ್ಯ ಕೈಗೊಳ್ಳಬಹುದಾಗಿರುತ್ತದೆ.

12. ಪುರಸಭೆಯಿಂದ/ನಗರ ಸಭೆಯ ವತಿಯಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಅಂದರೆ ಆಹಾರ ಪದಾರ್ಥಗಳನ್ನು ತನ್ನ ವಾಹನದಲ್ಲಿ ಸಾಗಾಣಿಕೆ ಮಾಡಬಹುದು ಎಂದು ಪುರಸಭೆಯಿಂದ/ನಗರ ಸಭೆಯ ಆರೋಗ್ಯ ಇಲಾಖೆಯಿಂದ ಅಗತ್ಯ ಅನುಮತಿ ಪತ್ರ ಪಡೆದಿರುವುದನ್ನು ಗುತ್ತಿಗೆದಾರ ಹಾಜರುಪಡಿಸತಕ್ಕದ್ದು.

13. ಗುತ್ತಿಗೆ ವಾಹನಕ್ಕೆ ಸಂಬಂಧಿಸಿದಂತೆ ಗುತ್ತಿಗೆದಾರ ಈ ಕೆಳಗೆ ಸೂಚಿಸಿರುವ ಅಗತ್ಯಗಳನ್ನು ಹಾಗೂ ನಿರ್ದಿಷ್ಟ ಮಾಹಿತಿಗಳನ್ನು ಪೂರೈಕೆ ಮಾಡುತ್ತೇನೆ ಎಂದು ಒಪ್ಪಿಗೆ ಸೂಚಿಸತಕ್ಕದ್ದು.

13ಅ. ಗುತ್ತಿಗೆ ವಾಹನ, ಇನ್ಸುಲೇಟೆಡ್ ಕಂಟೇನರ್ ಬಾಡಿ ಅಳವಡಿಸಿದ ವಾಹನ ಆಗಿರಬೇಕು. ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಆಕರ್ಷಕ ಜಾಹೀರಾತನ್ನು ಡೇರಿಯು ತಿಳಿಸುವ ಜಾಗದಲ್ಲಿ ಮಾತ್ರ ವಾಹನದ ಮೇಲೆ ಬರೆಸಿರಬೇಕು/ಬರೆಯಿಸಬೇಕು.

13ಬಿ. ರಾತ್ರಿ ಅವಧಿಯಲ್ಲಿ ವಾಹನಕ್ಕೆ ಹಾಲನ್ನು ಮತ್ತು ಹಾಲಿನ ಉತ್ಪನ್ನಗಳನ್ನು ಭರ್ತಿಮಾಡಲು ಹಾಗೂ ಇಳಿಸಲು ಅನುಕೂಲವಾಗುವಂತೆ ವಾಹನದ ಅಗತ್ಯ ಕಡೆಗಳಲ್ಲೆಲ್ಲಾ ಬೆಳಕಿನ ವ್ಯವಸ್ಥೆ ಮಾಡಿರತಕ್ಕದ್ದು.

13ಸಿ. ವಾಹನಕ್ಕೆ ಭದ್ರವಾದ ಬಿಗಿ ಹಿಂಬಾಗಿಲು ಇರತಕ್ಕದ್ದು.ಕೆನೆ ಬಣ್ಣವನ್ನು ಆ ಬಾಗಿಲಿಗೆ ಬಳಿಸಿರಬೇಕು ಅಥವಾ ಆರ್.ಟಿ.ಓ. ಇಲಾಖೆ ನಿರ್ದಿಷ್ಟವಾಗಿ ಸೂಚಿಸುವ ಬಣ್ಣ ಬಳಿಸಿರಬೇಕು.

14. ಅನುಬಂಧ–ಸಿನಲ್ಲಿ ನಮೂದಿಸಿರುವಂತೆ ಅಗತ್ಯ ಸಾಮರ್ಥ್ಯದ ವಾಹನವನ್ನು ಒದಗಿಸಲು ಗುತ್ತಿಗೆದಾರ ಬದ್ಧರಾಗಿರಬೇಕು/ಒಪ್ಪಿಗೆಯನ್ನು ಸೂಚಿಸತಕ್ಕದ್ದು.

15. ವಾಹನಕ್ಕೆ ಸಂಸ್ಕರಿಸಿದ ಹಾಲನ್ನು ಭರ್ತಿ ಮಾಡಲು ಇಳಿಸಲು ಹಾಗೂ ಸಾಗಾಣಿಕೆ ಕಾರ್ಯಕ್ಕೆ ಅಗತ್ಯವಾದ ಕೆಲಸಗಾರರನ್ನು ಗುತ್ತಿಗೆದಾರರೇ ಸ್ವಂತವಾಗಿ ವ್ಯವಸ್ಥೆ ಮಾಡತಕ್ಕದ್ದು. ಗುತ್ತಿಗೆ ಕಾರ್ಮಿಕರ ನಿಯಂತ್ರಣ ಹಾಗೂ ರದ್ದತಿ ವಿಧೇಯಕದ ನಿಯಮಕ್ಕೆ ಬದ್ಧನಾಗಿರಲು ಒಪ್ಪಿಗೆ ಸೂಚಿಸತಕ್ಕದ್ದು. ಕಾರ್ಮಿಕ ಕಾನೂನು/ನಿಯಮ ಉಲ್ಲಂಘಿಸಿದ ಕಾರಣದಿಂದಾಗಿ ಗುತ್ತಿಗೆ ಕಾರ್ಮಿಕ ಪರಿಹಾರ ಕೋರಿದರೆ ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಆಗುವ ನಷ್ಟವನ್ನು ಗುತ್ತಿಗೆದಾರ ಭರ್ತಿಮಾಡತಕ್ಕದ್ದು. ಶಿವಮೊಗ್ಗ ಹಾಲು ಒಕ್ಕೂಟವು ನಿಗದಿಪಡಿಸಿರುವ ಸಮವಸ್ತ್ರವನ್ನು ಚಾಲಕ ಹಾಗೂ ಲೋಡರ್‌ಗಳಿಗೆ ಗುತ್ತಿಗೆದಾರ ತನ್ನ ಸ್ವಂತ ಖರ್ಚಿನಲ್ಲಿ ಒದಗಿಸತಕ್ಕದ್ದು.

16. ಕಾರ್ಮಿಕ ಕಾನೂನು ವರ್ಕ್ಸ್‌ಮೆನ್ಸ್ ಕಾಂಪನ್ಸೇಷನ್ ಆಕ್ಟ್ ಅಥವಾ ಇತರೇ ಶಾಸನ ಬದ್ದ ಕಾಯಿದೆ, ನಿಯಮ ನಿಬಂಧನೆಗಳ ಷರತ್ತುಗಳನ್ನು ಪಾಲಿಸಬೇಕಾದ ಜವಾಬ್ದಾರಿ ಗುತ್ತಿಗೆದಾರನ ಮೇಲೆ ಸಂಪೂರ್ಣವಾಗಿ ಇರುತ್ತದೆ. ಹಾಗೂ ಈ ಬಗ್ಗೆ ಯಾವುದೇ ನಷ್ಟ/ಜವಾಬ್ದಾರಿ ಹೊಣೆ ಗುತ್ತಿಗೆದಾರನದ್ದಾಗಿರುತ್ತದೆ.

17. ಶಿವಮೊಗ್ಗ ಹಾಲು ಒಕ್ಕೂಟದ ಅಧಿಕಾರ ವರ್ಗ ಕಾಲಕಾಲಕ್ಕೆ ನೀಡುವ ಹಲವು ಸೂಚನೆಗಳನ್ನು ಎಚ್ಚರಿಕೆಯಿಂದ ಪಾಲಿಸತಕ್ಕದ್ದು. ಅದು ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸುರಕ್ಷಿತವಾಗಿ ಸಾಗಾಣಿಕೆ ಮಾಡುವ ಕುರಿತಾದವುಗಳಾಗಿರಬಹುದು.

18. ಸಾರ್ವಜನಿಕರ ಅನುಕೂಲಕ್ಕಾಗಿ ಕಾಲಕಾಲಕ್ಕೆ ಶಿವಮೊಗ್ಗ ಹಾಲು ಒಕ್ಕೂಟವು ಬಿ.ಎಂ.ಸಿ. ಹಾಲು ಶೇಖರಣಾ ಮಾರ್ಗ ಸ್ಥಳಗಳನ್ನು ಬದಲಿಸಬಹುದಾಗಿರುತ್ತದೆ. ಈ ರೀತಿಯ ಬದಲಾವಣೆ ಕಾರಣಕ್ಕಾಗಿ ಮಾರ್ಗದಲ್ಲಿನ ಮಾರಾಟ ಕೇಂದ್ರದಿಂದ ಪಡೆಯಬಹುದಾದ ನಗದು/ತಃಖ್ತೆ ಕಾರಣದಿಂದಾಗಿ ಗುತ್ತಿಗೆದಾರ ಯಾವುದೇ ನಷ್ಟವನ್ನು ಭರಿಸುವಂತೆ ಕೋರಲು ಅವಕಾಶ ಇರುವುದಿಲ್ಲ.

19. ಶೇಖರಣೆ ಸ್ಥಳಗಳು ಕಡಿಮೆ/ಹೆಚ್ಚಾಗಿ ಒಟ್ಟು ಕ್ರಮಿಸಬೇಕಾದ ದೂರ ವ್ಯತ್ಯಯಗೊಂಡರೂ ಗುತ್ತಿಗೆದಾರ ಸಾಗಾಣಿಕೆ ಕಾಮಗಾರಿಗೆ ತನ್ನ ಒಪ್ಪಿಗೆಯನ್ನು ಸೂಚಿಸತಕ್ಕದ್ದು.

20. ಶೇಖರಣೆ ಮಾರ್ಗದ ವಾಹನಗಳ ಪಥವನ್ನು ಶಿವಮೊಗ್ಗ ಹಾಲು ಒಕ್ಕೂಟವು ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು ಹಾಗೂ ಸಂಘಗಳನ್ನು ಕೈಬಿಡಬಹುದು ಅಥವಾ ಸೇರಿಸಬಹುದು, ಇಂತಹ ಸಂದರ್ಭದಲ್ಲಿ ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ.10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಗುತ್ತಿಗೆದಾರರ ಮನವಿಯನ್ನು ಪರಿಗಣಿಸಿ ಮಾರುಕಟ್ಟೆ ಬೆಲೆ ಆಧಾರದ ಮೇಲೆ ಅಥವಾ ಪ್ರೋರೇಟಾ ಆಧಾರದಲ್ಲಿ ಕಿ.ಮೀ.ದರ ಹೆಚ್ಚು ಅಥವಾ ಕಡಿಮೆ ಮಾಡಲಾಗುವುದು. ಅಂತಿಮವಾಗಿ ಶಿವಮೊಗ್ಗ ಹಾಲು ಒಕ್ಕೂಟದ ನಿರ್ವಾಹಕ ನಿರ್ದೇಶಕರ ನಿರ್ಧಾರವೇ ಅಂತಿಮವಾಗಿರುತ್ತದೆ.

21. ನಿಗಧಿಪಡಿಸಿರುವ ಸಾಗಾಣಿಕೆ ಮಾರ್ಗದಲ್ಲಿ ಓಡಾಡುವ ವಾಹನ ಚಲಿಸಲು ಸಾಧ್ಯವಾಗದೆ ಕೆಟ್ಟುನಿಂತರೆ 30 ನಿಮಿಷಗಳೊಗಾಗಿ ಬದಲಿ ವಾಹನವನ್ನು ಖಚಿತವಾಗಿ ವ್ಯವಸ್ಥೆ ಮಾಡಬೇಕಾದ ಹೊಣೆಗಾರಿಕೆ ಗುತ್ತಿಗೆದಾರನದಾಗಿರುತ್ತದೆ.

22. ಶಿವಮೊಗ್ಗ ಹಾಲು ಒಕ್ಕೂಟದ ನೌಕರ ವರ್ಗ, ಅಧಿಕೃತ ಪ್ರತಿನಿಧಿಗಳು, ಗುತ್ತಿಗೆದಾರನ ವಾಹನಗಳಲ್ಲಿ ಗುತ್ತಿಗೆದಾರನ ಸಿಬ್ಬಂದಿಯ ಜೊತೆಗೆ ಉಚಿತವಾಗಿ ಪ್ರಯಾಣಿಸಲು ಅನುಮತಿಯನ್ನು ಗುತ್ತಿಗೆದಾರ ನೀಡತಕ್ಕದ್ದು.

23. ಗುತ್ತಿಗೆ ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ನೌಕರ ವರ್ಗ ಅಥವಾ ಗುತ್ತಿಗೆದಾರ ಸಾಗಾಣಿಕೆ ಹಾಗೂ ಭರ್ತಿಮಾಡಲು ಇಳಿಸಲು ನೇಮಿಸಿಕೊಂಡಿರುವ ಸಿಬ್ಬಂದಿಗಳನ್ನು ಹೊರತುಪಡಿಸಿ ಮತ್ತಾರನ್ನೂ ಈ ಕಾರ್ಯಕ್ಕೆ ನೇಮಕ ಆಗಿರುವ ವಾಹನಗಳಲ್ಲಿ ಸಂಚರಿಸಲು ಅವಕಾಶ ನೀಡತಕ್ಕದ್ದಲ್ಲ.

24. ಸಾಗಾಣಿಕೆಗೆ ಅನುಮತಿ ನೀಡಿರುವ ಸಾಮಾಗ್ರಿಗಳನ್ನಲ್ಲದೆ ಮತ್ತಾವುದೇ ಸಾಮಾಗ್ರಿಗಳನ್ನು ಈ ವಾಹನದಲ್ಲಿ ಸಾಗಿಸತಕ್ಕದ್ದಲ್ಲ.

25. ಸಾಗಾಣಿಕೆ ವೆಚ್ಚ ಈ ಕೆಳಕಂಡ ವಿಷಯಕ್ಕೆ ಹೊರತುಪಡಿಸಿ ಬೇರೆ ಯಾವುದೇ ಕಾರಣಕ್ಕೆ ಏರಿಕೆ ಸಾಧ್ಯವಿಲ್ಲ. ಐ.ಒ.ಸಿ., ಜಿ.ಒ.ಕೆ., ಡೀಸೆಲ್‌ನ ಪ್ರತಿ ಲೀಟರ್‌ನ ಬೆಲೆಯಲ್ಲಿ ಹೆಚ್ಚಳ ಮಾಡುವ ಪರಿಮಾಣವನ್ನು ವಿವಿಧ ಸಾಮರ್ಥ್ಯದ ವಾಹನಗಳಿಗನುಗುಣವಾಗಿ ಹೆಚ್ಚಳದ ಅಥವಾ ಇಳಿಕೆಯ ಪ್ರಮಾಣ ಪ್ರತಿ ಲೀಟರ್‌ಗೆ ಸರಾಸರಿ ನೀಡುವ ಮೈಲೇಜ್ ಈ ಕೆಳಗಿನಂತಿರುತ್ತದೆ.

ಅ) 10 ಟನ್‌ಗೆ ಟ್ಯಾಂಕರ್ ವಾಹನಗಳಿಗೆ : 04 ಕಿ.ಮೀ./ ಲೀಟರ್

26. ದರಪಟ್ಟಿ ದಸ್ತಾವೇಜು ಆಹ್ವಾನಿಸಿದ ಸಂದರ್ಭದಲ್ಲಿ ಪ್ರಕಟವಾದ ಮಾರ್ಗದ ದೂರ ಕೇವಲ ತಾತ್ಕಾಲಿಕ ಹಾಗೂ ಗುತ್ತಿಗೆದಾರರ ಬಿಲ್ಲುಗಳನ್ನು ಪಾವತಿಸುವ ಕ್ರಮಕ್ಕಾಗಿ ನಮೂದಿಸಲಾಗಿದ್ದು, ಹಾಗಾಗಿ ಶಿವಮೊಗ್ಗ ಹಾಲು ಒಕ್ಕೂಟದ ಪ್ರತಿನಿಧಿಗಳು ಹಾಗೂ ಗುತ್ತಿಗೆದಾರನ ಪ್ರತಿನಿಧಿಗಳು ಕಿ.ಮೀ. ಪರಿಶೀಲನೆ (ದೂರ ಪರಿಶೀಲನೆ) ನಡೆಸಿ ನೀಡುವ ಖಚಿತ ದೂರದ ವಿವರವನ್ನು ಗುತ್ತಿಗೆದಾರ ಒಪ್ಪಿಕೊಳ್ಳತಕ್ಕದ್ದು.

27. ಶಿವಮೊಗ್ಗ ಹಾಲು ಒಕ್ಕೂಟವು ನಿರ್ದಿಷ್ಟಪಡಿಸಿದ ವೇಳೆಯಲ್ಲಿ, ಗುತ್ತಿಗೆದಾರ ವಾಹನಗಳನ್ನು ಪೂರೈಸತಕ್ಕದ್ದು. ಗುತ್ತಿಗೆದಾರನಿಗೆ ಅಲ್ಪಕಾಲೀನ ಸೂಚನೆ ನೀಡಿ ವೇಳೆ ಬದಲಿಸುವ ಹಕ್ಕು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಇರುತ್ತದೆ.

28. ಗಲಭೆಗಳಿಂದಾಗಿ ನಾಗರೀಕರ ಪ್ರತಿಭಟನೆ, ಕಾರ್ಮಿಕರ ಮುಷ್ಕರ/ಹೋರಾಟದಿಂದಾಗಿ ಅಥವಾ ಬಂದ್ ಸಮಯದಲ್ಲಿ, ಗುತ್ತಿಗೆದಾರನ ವಾಹನ ಜಖಂಗೊಂಡರೆ ಗುತ್ತಿಗೆದಾರ ಪರಿಹಾರ ಕೇಳುವ ಹಾಗಿಲ್ಲ. ಸಂಸ್ಥೆಯ ಒಳ ಆವರಣದಲ್ಲಿ ಅಥವಾ ಹೊರ ಆವರಣದಲ್ಲಿ ಹೊರಗಿನವರಿಂದಾಗಲೀ ಜಖಂ ಆಗಬಹುದು.

29. ಮಿಲಿಟರಿ ಹಾಗೂ ನಾಗರೀಕ ಅಧಿಕಾರವು ಕರ್ಪ್ಯೂ ವಿಧಿಸಿರುವ ಸಂದರ್ಭದಲ್ಲಿ ಯಾವುದೇ ನಿರ್ಬಂಧ ಹಾಕಿರುವ ಸಂದರ್ಭದಲ್ಲಿ ವಾಹನ ಓಡಾಟಕ್ಕೆ ನಿರ್ಬಂಧವನ್ನು ಹೊರಿಸಿರುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ಯಾರಿಂದ ವಾಹನ ಓಡಾಟಕ್ಕೆ ಅನುಮತಿ ಪಡೆಯಬೇಕೋ ಅಂತ ಅಧಿಕೃತ ಅಧಿಕಾರಿಗಳಿಂದ ಅನುಮತಿ ಪಡೆದು ವಾಹನ ಹಾಗೂ ಸಿಬ್ಬಂದಿಯ ಚಲನವಲನಕ್ಕೆ ಅವಕಾಶ ಕಲ್ಪಿಸಿಕೊಡುತ್ತದೆ.

30. ಗುತ್ತಿಗೆದಾರನ ನೌಕರ, ಪ್ರತಿನಿಧಿ ಸಾಗಾಣಿಕೆಗೆ ನೀಡಿರುವ ಹಾಲನ್ನು ಮತ್ತು ಹಾಲಿನ ಉತ್ಪನ್ನವನ್ನು ಇತರೇ ವಸ್ತುಗಳನ್ನು ಕದಿಯುತ್ತಿದ್ದರೆ ಮತ್ತು ಹಾಳು ಮಾಡುತ್ತಿದ್ದರೆ ಅದು ಸಾಗಾಣಿಕೆ ಸಂದರ್ಭದಲ್ಲಿ ಭರ್ತಿಮಾಡುವ, ಇಳಿಸುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ಆವರಣದಲ್ಲಿಯೇ ಅಥವಾ ವಿತರಣಾ ಕೇಂದ್ರಗಳಲ್ಲಿ ಆಗುತ್ತಿದ್ದರೆ ಇದರಿಂದಾಗುವ ನಷ್ಟ ಹಾಗೂ ಹಾಳಾಗುವುದಕ್ಕೆ ಗುತ್ತಿಗೆದಾರನೇ ಹೊಣೆಯಾಗುತ್ತಾನೆ. ಹಾಗೂ ಆದ ನಷ್ಟವನ್ನು ಗುತ್ತಿಗೆದಾರ ಭರಿಸತಕ್ಕದ್ದು, ಇಲ್ಲವೇ ಶಿವಮೊಗ್ಗ ಹಾಲು ಒಕ್ಕೂಟ ತನ್ನ ವಿವೇಚನೆಗೆ ಸರಿಕಂಡುಬಂದರೆ ಗುತ್ತಿಗೆದಾರ ಇರಿಸಿರುವ ಇಡು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅಥವಾ ಗುತ್ತಿಗೆಯನ್ನೇ ವಜಾ ಮಾಡಬಹುದಾಗಿರುತ್ತದೆ ಅಥವಾ ಸೂಕ್ತ ದಂಡ ವಿಧಿಸಲಾಗುವುದು.

31. ಗುತ್ತಿಗೆದಾರನ ನೌಕರ/ಪ್ರತಿನಿಧಿ ಶಿವಮೊಗ್ಗ ಹಾಲು ಒಕ್ಕೂಟವು ನೌಕರರೊಂದಿಗೆ ಏಜೆಂಟರೊಂದಿಗೆ ಅಥವಾ ಸಾರ್ವಜನಿಕರೊಂದಿಗೆ ತಪ್ಪಾಗಿ ನಡೆದುಕೊಂಡರೆ ಅಕ್ರಮ ವ್ಯವಹಾರಗಳಲ್ಲಿ ತೊಡಗಿದರೆ ಅಂತಹ ನೌಕರನನ್ನು ಸಾಗಾಣಿಕೆ ಕಾರ್ಯದಿಂದ ತೆಗೆದುಹಾಕಿ ಎಂದು ಶಿವಮೊಗ್ಗ ಹಾಲು ಒಕ್ಕೂಟವು ಸೂಚಿಸಬಹುದು. ಹಾಗೆ ಸೂಚಿಸಿದಾಗ ಗುತ್ತಿಗೆದಾರ ಅಂತಹ ಅನಪೇಕ್ಷಿತ ವ್ಯಕ್ತಿಯನ್ನು ಕೂಡಲೇ ಕೆಲಸದಿಂದ ತೆಗೆದುಹಾಕಬೇಕು. ಅವನನ್ನು ಶಿವಮೊಗ್ಗ ಹಾಲು ಒಕ್ಕೂಟದ ಇದೇ ಗುತ್ತಿಗೆದಾರರನಾಗಲೀ, ಇತರೇ ಗುತ್ತಿಗೆದಾರನಾಗಲೀ ಮತ್ತೆ ಕೆಲಸಕ್ಕೆ ನೇಮಕ ಮಾಡಿಕೊಳ್ಳಬಾರದು.

32. ನಿರ್ದಿಷ್ಟಪಡಿಸಿದ ವೇಳೆಯಲ್ಲಿ ಗುತ್ತಿಗೆದಾರ ಸಾಗಾಣಿಕೆ ಮಾಡುವಲ್ಲಿ ವಿಫಲನಾದರೆ ಇದರಿಂದಾಗಿ ಹಾಲು ಹುಳಿ ಆಗಿ ಹಾಳಾಗುವು ಸಂಭವವಿರುತ್ತದೆ. ಆದ್ದರಿಂದ ಗುತ್ತಿಗೆದಾರರು ತಮಗೆ ವಹಿಸಿದ ಜವಾಬ್ದಾರಿಯನ್ನು ಸಮಯಕ್ಕೆ ಸರಿಯಾಗಿ ನಿಭಾಯಿಸತಕ್ಕದ್ದು.

33. ಗುತ್ತಿಗೆದಾರನ ವಾಹನ ಸಾಗಾಣಿಕೆ ಕಾರ್ಯಕ್ಕೆ ಶಿವಮೊಗ್ಗ ಹಾಲು ಒಕ್ಕೂಟದ ಆವರಣಕ್ಕೆ ಪ್ರವೇಶಿಸುವ, ನಿರ್ಗಮಿಸುವ, ಓಡಾಡುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ಕಟ್ಟಡದ ಆಸ್ತಿಗೆ ಹಾನಿಯಾಗದಂತೆ ಎಚ್ಚರವಹಿಸತಕ್ಕದ್ದು. ಹಾಗಲ್ಲದೆ ನಷ್ಟ ಉಂಟುಮಾಡಿದರೆ, ನಷ್ಟದ ಮೊತ್ತವನ್ನು ಅವರ ಬಿಲ್ಲಿನಲ್ಲಿ ಕಡಿತಮಾಡಿ ಅಥವಾ ಇತರ ಅಗತ್ಯ ಕ್ರಮದಿಂದ ವಸೂಲು ಮಾಡಲಾಗುವುದು.

34. ಗುತ್ತಿಗೆದಾರನ ವಾಹನ ಡೇರಿಯ ಆವರಣದಲ್ಲಿ ಅಥವಾ ಹೊರಗಡೆ ಅಪಘಾತಕ್ಕೆ ಗುರಿಯಾದರೆ ಆ ನಷ್ಟವನ್ನು ಶಿವಮೊಗ್ಗ ಹಾಲು ಒಕ್ಕೂಟದಿಂದ ಪರಿಹಾರವಾಗಿ ಪಡೆಯತಕ್ಕದ್ದಲ್ಲ. ಗುತ್ತಿಗೆದಾರ ಗುತ್ತಿಗೆ ಅವಧಿ/ಹಚ್ಚುವರಿ ಅವಧಿಯಲ್ಲಿ ಸಾಗಾಣಿಕೆ ಮಾಡುವ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೌಲ್ಯಕ್ಕೆ ವಿಮೆ ಮಾಡಿಸಿರಬೇಕು.

35. ಗುತ್ತಿಗೆದಾರನ ವಾಹನ ಶಿವಮೊಗ್ಗ ಹಾಲು ಒಕ್ಕೂಟದ ಆವರಣಕ್ಕೆ ಬರುವ ಹಾಗು ಹೊರ ಹೋಗುವ ಇಲ್ಲವೇ ಆವರಣದಲ್ಲಿರುವ ಅನುಮತಿಯುಳ್ಳ ವ್ಯಕ್ತಿಯನ್ನು ಗಾಯಗೊಳಿಸುವುದು ಅಥವಾ ಸಾವಿಗೆ ಕಾರಣವಾಗದಂತೆ ಎಚ್ಚರಿಕೆ ವಹಿಸತಕ್ಕದ್ದು.

36. ಶಿವಮೊಗ್ಗ ಹಾಲು ಒಕ್ಕೂಟದ ಸಿಬ್ಬಂದಿಗೆ/ ಅನುಮತಿಯುಳ್ಳ ವ್ಯಕ್ತಿಗೆ ಉಂಟಾಗಬಹುದಾದ ಗಾಯ, ಅದರಿಂದ ಡೇರಿಯ ನೌಕರರ ಪರಿಹಾರ ನೀಡಿಕೆ ನಿಯಮದಡಿ ಇತರೆ ಯಾವುದೇ ಕಾನೂನಿನಡಿ ಜಾರಿಯಲ್ಲಿರುವ ನಿಬಂಧನೆ ಅಧಿನಿಯಮದಡಿ ಪರಿಹಾರ ಧನವನ್ನು ಗುತ್ತಿಗೆದಾರ ಭರಿಸತಕ್ಕದ್ದು.

37. ಈ ಗುತ್ತಿಗೆಯಡಿ ತನಗೆ ದತ್ತವಾಗಿರುವ ಹಕ್ಕು ಬಾಧ್ಯತೆಯನ್ನು ಇತರ ವ್ಯಕ್ತಿಗೆ ವಹಿಸಿಕೊಡತಕ್ಕದ್ದಲ್ಲ.

38. ಈ ಗುತ್ತಿಗೆಯಡಿ ಆತನಿಗೆ ವಹಿಸಿರುವ ಸಾಗಾಣಿಕೆ ಕಾಮಗಾರಿಯನ್ನು ನಿರ್ವಹಿಸಲು ವಿಫಲನಾದಲ್ಲಿ ಅಥವಾ ಸಾಗಾಣಿಕೆಯ ಪೂರ್ಣ ಕಾರ್ಯವನ್ನು ಕೈಗೊಳ್ಳದಿದ್ದಲ್ಲಿ ಅಥವಾ ಭಾಗಶಃ ನಿರ್ವಹಿಸದಿದ್ದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ವಿಧಿಸಿರುವ ನಿಯಮ ನಿಬಂಧನೆಯಡಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಬಹುದಾಗಿದೆ.

ಎ) ಗುತ್ತಿಗೆಯನ್ನು ವಜಾ ಮಾಡಬಹುದು ಅಥವಾ ಯಾವುದೇ ಭಾಗದ ಕಾರ್ಯವನ್ನು ಅಥವಾ

ಬಿ) ಆಧಾರ ಮೊತ್ತವನ್ನು ಪೂರ್ಣ ಮುಟ್ಟುಗೋಲು ಅಥವಾ ಶಿವಮೊಗ್ಗ ಹಾಲು ಒಕ್ಕೂಟ ದಿಂದ ಉಂಟಾದ ನಷ್ಟದ ಪ್ರಮಾಣಕ್ಕೆ ಸರಿದೂಗಿಸುವಷ್ಟು ಹಾಗೂ ಅಥವಾ

ಸಿ) ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾದ ನಷ್ಟದ ಪ್ರಮಾಣವನ್ನು ಪಾವತಿಸುವಂತೆ ಗುತ್ತಿಗೆದಾರರಿಗೆ ಸೂಚಿಸುವುದು.

ಡಿ) ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾದ ನಷ್ಟವನ್ನು ಗುತ್ತಿಗೆದಾರರು ಬೇರೆ ಮಾರ್ಗದಲ್ಲಿ ವಾಹನ ಒದಗಿಸಿದ್ದರೆ ಅದರಿಂದ ಸರಿದೂಗಿಸಿಕೊಳ್ಳಲಾಗುವುದು.

ಡಿ) ಈ ಕಾರಣದಿಂದಾಗಿ ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾದ ಹೆಚ್ಚುವರಿ ವೆಚ್ಚವನ್ನು ಹಾಗೂ ಇಂತಹ ಸೇವೆಯನ್ನು ಇತರರಿಂದ ಪಡೆದುದಕ್ಕಾಗಿ ಆದ ಹೆಚ್ಚುವರಿ ವೆಚ್ಚದ ಮೊತ್ತವನ್ನು ಗುತ್ತಿಗೆದಾರನಿಂದ ಪಡೆಯತಕ್ಕದ್ದು.

39. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಅಕಾಲ ಮರಣಹೊಂದಿದಲ್ಲಿ ಸಾಗಾಣಿಕೆ ಗುತ್ತಿಗೆಯನ್ನು ಅವರ ವಾರಸುದಾರರಿಗೆ ಮುಂದುವರೆಸುವ ಅಥವಾ ನೀಡದಿರುವ ಹಕ್ಕು ನಿರ್ವಾಹಕ ನಿರ್ದೇಶಕರಿಗೆ ಕಾಯ್ದಿರಿಸಲಾಗಿದೆ. ಹಾಗು ಅಂತಹ ಸಂದರ್ಭಗಳಲ್ಲಿ ಅವರಿಗೆ ಡೇರಿಯ ವತಿಯಿಂದ ಪಾವತಿಸುವ ಹಣವೇನಾದರೂ ಇದ್ದಲ್ಲಿ ಇದನ್ನು ಕಾನೂನು ರೀತಿ ನಿಯಮಾನುಸಾರ ಪರಿಶೀಲಿಸಿ ಬಿಡುಗಡೆಗೊಳಿಸುವ ಅಧಿಕಾರವು ನಿರ್ವಾಹಕ ನಿರ್ದೇಶಕರು ಶಿವಮೊಗ್ಗ ಹಾಲು ಒಕ್ಕೂಟದ ವಿವೇಚನೆಗೆ ಒಳಪಟ್ಟಿರುತ್ತದೆ.

40. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಯಾವುದೇ ಅಪರಾಧ / ಕಾನೂನು ಉಲ್ಲಂಘನೆಗಳಲ್ಲಿ ಭಾಗಿಯಾಗಿರುವುದು ಕಂಡು ಬಂದಲ್ಲಿ ಇಂತವರ ಮೇಲೆ ಆರಕ್ಷಕ ಠಾಣೆ / ನ್ಯಾಯಾಲಯದಲ್ಲಿ ಮೊಕದ್ದಮೆಗಳೇನಾದರೂ ಇರುವುದು ಕಂಡುಬಂದಲ್ಲಿ ಇಂತಹ ಗುತ್ತಿಗೆದಾರರ ಗುತ್ತಿಗೆಯನ್ನು ಯಾವುದೇ ಮುನ್ಸೂಚನೆ ನೀಡದೆ ರದ್ದುಪಡಿಸುವ ಅಧಿಕಾರವು ನಿರ್ವಾಹಕ ನಿರ್ದೇಶಕರು ಶಿವಮೊಗ್ಗ ಹಾಲು ಒಕ್ಕೂಟ ಕಾಯ್ದಿರಿಸಲಾಗಿದೆ. ಮತ್ತು ಅಂತಹವರ ಇಡುಗಂಟನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

41. ಗುತ್ತಿಗೆಯ ವಾಹನ ಚಾಲಕರು/ಸಿಬ್ಬಂದಿಗಳು ಡೇರಿಯ ಆವರಣದೊಳಗಡೆ ಟೇಪ್‌ರಿಕಾರ್ಡರ್ / ಐ ಪಾಡ್ /ಹಾರ್ನ್ / ಮೊಬೈಲ್, ದೂರವಾಣಿ / ತಂಬಾಕು ವಗೈರೆ ಉಪಯೋಗಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಈ ಎರಡು ನಿಯಮವನ್ನು ಉಲ್ಲಂಘಿಸುವುದು ಕಂಡು ಬಂದಲ್ಲಿ ಸೂಕ್ತ ದಂಡ ವಿಧಿಸಲಾಗುವುದಲ್ಲದೆ ಡೇರಿಯ ನಿಯಮಗಳಂತೆ ಕ್ರಮ ಜರುಗಿಸಲಾಗುವುದು.

42. ಗುತ್ತಿಗೆ ಅವಧಿಯಲ್ಲಿ ಗುತ್ತಿಗೆದಾರರು ನೀಡಿರುವ ವಾಹನಕ್ಕೆ ಏಜೆಂಟರು ಹಾಗೂ ಗ್ರಾಹಕರ ಮಾಹಿತಿಗಾಗಿ ಗುರುತಿಗಾಗಿ ನಂದಿನಿ ಉತ್ಪನ್ನಗಳ ಜಾಹೀರಾತನ್ನು ಗುತ್ತಿಗೆ ವಾಹನಗಳಿಗೆ ಡೇರಿಯ ವತಿಯಿಂದ ಬರೆಸಲಾಗುವುದು. ಸದರಿ ಜಾಹೀರಾತನ್ನು ಗುತ್ತಿಗೆ ಅವಧಿಯವರೆವಿಗೂ ಕಾಪಾಡುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಗುತ್ತಿಗೆದಾರರ ಅಜಾಗರೂಕತೆಯಿಂದ ಜಾಹೀರಾತುಗಳು ಹಾಳಾದಲ್ಲಿ ಪುನಃ ಬರೆಸುವ ವೆಚ್ಚವನ್ನು ಸಾರಿಗೆ ಬಿಲ್ಲಿನಿಂದ ವಸೂಲಿ ಮಾಡಲು ಕ್ರಮ ಜರುಗಿಸಲಾಗುವುದು.

43. ದಿನನಿತ್ಯದ ವಾಹನ ಕೆಟ್ಟು ನಿಂತಾಗ ಅಪಘಾತ ಆದಾಗ ಇತರೆ ಅನಿರೀಕ್ಷಿತ ಸಂದರ್ಭ ಒದಗಿ ಬಂದಾಗ ಬದಲಿ ವಾಹನವನ್ನು ಗುತ್ತಿಗೆದಾರ ಒದಗಿಸಿದಾಗ, 42 ರ ನಿಯಮದಡಿ ಹಾಗೂ ಉಪನಿಯಮ 1,2,3 ರ ಅಡಿಯಲ್ಲಿ ದಂಡವನ್ನು ವಿಧಿಸಲಾಗುವುದಿಲ್ಲ. ಬದಲಿ ವಾಹನವನ್ನು ಒದಗಿಸಿದ್ದರೂ ಉಳಿದ ಉಪನಿಬಂಧನೆ 4 ರಿಂದ 8 ರ ಅಡಿಯಲ್ಲಿ ಕ್ರಮ ಜರುಗಿಸಲಾಗುವುದು.

44. ಗುತ್ತಿಗೆ ಅವಧಿಯಲ್ಲಿ ವಿತರಣಾ ಕಾರ್ಯಕ್ಕೆ ಯಾವುದೇ ದಿನ ವಾಹನವನ್ನು ಒದಗಿಸುವಲ್ಲಿ ವಿಫಲವಾದರೆ, ಶಿವಮೊಗ್ಗ ಹಾಲು ಒಕ್ಕೂಟವು ಅಂದಿನ ಕಾರ್ಯಕ್ಕೆ ಮಾಡಿದ ಸಾರಿಗೆ ವೆಚ್ಚ ಹಾಗೂ ಪ್ರತಿ ಟ್ರಿಪ್‌ಗೆ ತಲಾ ರೂ. 100.00 ರಂತೆ ದಂಡ ವಿಧಿಸಲಾಗುವುದು.

45. ಗುತ್ತಿಗೆದಾರರ ವಾಹನಗಳನ್ನು ಪರಿಶೋಧಿಸಿದಾಗ, ವಾಹನದಲ್ಲಿ ಗೇಟ್ ಪಾಸ್/ ಇನ್‌ವಾಯ್ಸ್ / ಸೇಲ್ಸ್ ಶೀಟ್‌ಗಿಂತ ಹೆಚ್ಚುವರಿ ಹಾಲು ಮತ್ತು ಹಾಲಿನ ಉತ್ಪನ್ನಗಳು, ಕ್ರೇಟುಗಳು, ಕ್ಯಾನುಗಳು ಅಥವಾ ಡೇರಿಗೆ ಸಂಬಂಧಿಸಿದ ವಸ್ತುಗಳು ಅನಧಿಕೃತವಾಗಿ ರವಾನೆಯಾಗತ್ತಿದ್ದಲ್ಲಿ, ಅದನ್ನು ವಶಪಡಿಸಿಕೊಂಡು ದಂಡ ವಿಧಿಸಲಾಗುವುದು. ಇಂತಹ ತಪ್ಪುಗಳು ಪುನರಾವರ್ತನೆಯಾದಲ್ಲಿ ಹೆಚ್ಚಿನ ದಂಡ ವಿಧಿಸಲಾಗುವುದಲ್ಲದೆ ದಂಡದ ಜೊತೆಗೆ ಗುತ್ತಿಗೆಯನ್ನು ರದ್ದುಪಡಿಸಲಾಗುವುದು.

46. ಚಾಲಕನಿಗೆ /ಲೋಡರ್‌ಗಳಿಗೆ ಡೇರಿಯೊಳಗೆ ಪ್ರವೇಶ ಅನುಮತಿ ಪತ್ರ ನೀಡುವ ಸಲುವಾಗಿ ಚಾಲಕನ /ಲೋಡರ್‌ಗಳ ಪಾಸ್ ಪೋರ್ಟ್ ಅಳತೆಯ ಎರಡು ಭಾವ ಚಿತ್ರಗಳು, ಹೆಸರು, ವಿಳಾಸವನ್ನು ಹೊಂದಿರುವ ಗುರುತಿನ ಚೀಟಿ ಗುತ್ತಿಗೆದಾರರು ನೀಡತಕ್ಕದ್ದು.

47. ಅಂತಿಮ ಹಣ ಪಾವತಿ ಮುನ್ನ ಇತ್ತೀಚಿನ ವರಮಾನ ತೆರಿಗೆ ಪ್ರಮಾಣ ಪತ್ರ/ವೃತ್ತಿ ತೆರಿಗೆ ಪ್ರಮಾಣ ಪತ್ರ ಒದಗಿಸತಕ್ಕದ್ದು.

48. ಗುತ್ತಿಗೆದಾರರು ವೃತ್ತಿ ತೆರಿಗೆ ನೋಂದಣಿ ಮಾಡಿಸಿ ಸರ್ಕಾರವು ನಿಗಧಿಪಡಿಸಿರುವ ವೃತ್ತಿ ತೆರಿಗೆಯನ್ನು ಸರ್ಕಾರಕ್ಕೆ ಪಾವತಿ ಮಾಡಿರಬೇಕು. ತಪ್ಪಿದ್ದಲ್ಲಿ ಸರ್ಕಾರದಿಂದ ನಿಗದಿಪಡಿಸಿರುವ ವೃತ್ತಿ ತೆರಿಗೆಯನ್ನು ಸಾರಿಗೆ ಗುತ್ತಿಗೆದಾರರ ಬಿಲ್ಲಿನಲ್ಲಿ ಕಟಾಯಿಸಿ ಸರ್ಕಾರಕ್ಕೆ ಪಾವತಿಸಲಾಗುವುದು.

49. ಗುತ್ತಿಗೆದಾರ ನಿಯಮ ನಿಬಂಧನೆಗೆ ಭಂಗ ತಂದಿದ್ದೇ ಆದರೆ, ಗುತ್ತಿಗೆ ರದ್ದಾಗುತ್ತದೆಂದು ಅರಿತವನಾಗಿರಬೇಕು. ನಿಬಂಧನೆ ಭಂಗದಿಂದಾಗಿ ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾಗಬಹುದಾದ ನಷ್ಟವನ್ನು ಭರಿಸುವ ಮತ್ತು ಶಿವಮೊಗ್ಗ ಹಾಲು ಒಕ್ಕೂಟವು ಆಧಾರ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದರ ಬಗ್ಗೆ ಗುತ್ತಿಗೆದಾರ ಅರಿತವನಾಗಿರಬೇಕು.

50. ಗುತ್ತಿಗೆದಾರರು ಪ್ರತಿ ತಿಂಗಳು ತಮ್ಮ ಗುತ್ತಿಗೆ ಹಣ ಪಡೆಯುವ ಸಲುವಾಗಿ ಎಸ್.ಬಿ.ಎಂ. ಯಾವುದೇ ಶಾಖೆಯ ಬ್ಯಾಂಕಿನಲ್ಲಿ ಖಾತೆ ಉಳ್ಳವರಾಗಿರಬೇಕು ಹಾಗೂ ಪಾನ್ ಕಾರ್ಡ್ ಹೊಂದಿದ್ದು, ಬಿಲ್‌ನ ಮೇಲೆ ಪಾನ್ ನಂ. ನಮೂದಿಸತಕ್ಕದ್ದು.

51. ಈ ಗುತ್ತಿಗೆಯಿಂದ ಎದುರಾಗಬಹುದಾದ ಎಲ್ಲಾ ವಿವಾದಗಳನ್ನು ವ್ಯವಸ್ಥಾಪಕ ನಿರ್ದೇಶಕರು ಶಿವಮೊಗ್ಗ ಹಾಲು ಒಕ್ಕೂಟರವರ ಗಮನಕ್ಕೆ ತರತಕ್ಕದ್ದು ಅವರೇ ಈ ಸಮಸ್ಯೆಯ ಇತ್ಯರ್ಥದ ಬಗ್ಗೆ ಪರಮಾಧಿಕಾರ ಉಳ್ಳವರಾಗಿದ್ದ ಅವರ ನಿರ್ಧಾರವೇ ಅಂತಿಮವಾದುದೂ ಆಗಿದೆ.

52. ಮೇಲಿನ ನಿಯಮಗಳಿಗೆ ಇತರೆ ನಿಯಮಗಳನ್ನು ಸೇರಿಸುವ ಅಥವಾ ಕಳೆಯುವ ಮತ್ತು ವ್ಯತ್ಯಯಗೊಳಿಸುವ ಅಧಿಕಾರವನ್ನು ಶಿವಮೊಗ್ಗ ಹಾಲು ಒಕ್ಕೂಟವು ಕಾಯ್ದಿರಿಸಿಕೊಂಡಿದೆ.

53. ಯಾವುದೇ ಗುತ್ತಿಗೆದಾರರು ಸಕಾರಣದಿಂದ ಗುತ್ತಿಗೆಯನ್ನು ರದ್ದುಗೊಳಿಸಲು ಇಚ್ಛಿಸಿದಲ್ಲಿ ಸದರಿಯವರು 65 ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಡೇರಿಗೆ ತಿಳಿಸತಕ್ಕದ್ದು, ಶಿವಮೊಗ್ಗ ಹಾಲು ಒಕ್ಕೂಟದ ನಿರ್ವಾಹಕ ನಿರ್ದೇಶಕರು ಸದರಿ ಮನವಿಯನ್ನು ಪರಿಗಣಿಸಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಗುತ್ತಿಗೆಯನ್ನು ರದ್ದುಗೊಳಿಸುವ ಅಧಿಕಾರ ಹೊಂದಿರುತ್ತಾರೆ.

54. ಗುತ್ತಿಗೆದಾರರು ನಿಯಮ ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ರದ್ದು ಮಾಡಲು ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಅಧಿಕಾರ ಉಳ್ಳವರಾಗಿರುತ್ತಾರೆ. ಗುತ್ತಿಗೆ ರದ್ದುಪಡಿಸಿದಲ್ಲಿ ಆಗುವ ನಷ್ಟಕ್ಕೆ ಗುತ್ತಿಗೆದಾರನೇ ಜವಾಬ್ದಾರನಾಗಿದ್ದು ಅದನ್ನು ವಸೂಲಿ ಮಾಡುವ/ ಸರಿಪಡಿಸುವ ಅಧಿಕಾರ ನಿರ್ವಾಹಕ ನಿರ್ದೇಶಕರು, ಶಿವಮೊಗ್ಗ ಹಾಲು ಒಕ್ಕೂಟರವರಿಗೆ ಇರುತ್ತದೆ.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

## ಸಾರಿಗೆದಾರರ ಪೂರ್ಣ ಮಾಹಿತಿ

1 ಸಾರಿಗೆದಾರರ ಹೆಸರು :

2 ವಿಳಾಸ ದೂರವಾಣಿ ಸಂಖ್ಯೆ / ಫ್ಯಾಕ್ಸ್ ಸಂಖ್ಯೆ / ಮೊಬೈಲ್ ಸಂಖ್ಯೆ :

3 ನೀವು ಕಂಪನಿ ಪಾಲುದಾರರಾಗಿದ್ದಲ್ಲಿ ಅದರ ಪೂರ್ಣ ಮಾಹಿತಿ :

4. ಸಾರಿಗೆ ಕಾರ್ಯ ಪ್ರಾರಂಭಿಸಿದ ವರ್ಷ ನೀವು ವ್ಯವಹರಿಸುವ ಬ್ಯಾಂಕಿನ ವಿಳಾಸ ಮತ್ತು ಖಾತೆ ಸಂಖ್ಯೆ :

5. ನಿಮ್ಮ ಹೆಸರಿನಲ್ಲಿ ಅಥವಾ ಕಂಪನಿ ಹೆಸರಿನಲ್ಲಿ ಹೊಂದಿರುವ ವಾಹನಗಳ ಸಂಖ್ಯೆ :

6. ಗುತ್ತಿಗೆ ನಿರ್ವಹಿಸಲು ಇಚ್ಛಿಸುವ ಮಾರ್ಗದ ಹೆಸರು/ ಸಂಖ್ಯೆ :

7. ಮಾರ್ಗಕ್ಕೆ ಒದಗಿಸುವ ವಾಹನ ಸಂಖ್ಯೆ ಮತ್ತು ದಾಖಲಾತಿ ಪ್ರತಿಗಳು :

ಆರ್.ಸಿ. ಇನ್ಸೂರೆನ್ಸ್ ತೆರಿಗೆ ಇತ್ಯಾದಿಗಳು

8. ಈ ಕೆಳಗಿನ ಮಾಹಿತಿಗಳಿದ್ದಲ್ಲಿ ಲಗತ್ತಿಸುವುದು :

ಎ) ಆದಾಯ ತೆರಿಗೆ ಪ್ರಮಾಣ ಪತ್ರ

ಬಿ) ಬ್ಯಾಂಕರ್ ಸಾಲ್ವೆನ್ಸ ಪ್ರಮಾಣ ಪತ್ರ

1) ವೃತ್ತಿ ತೆರಿಗೆ ನೋಂದಣಿ ಪತ್ರ

**ತಮ್ಮ ವಿಶ್ವಾಸಿ,**

**ಟೆಂಡರ್‌ದಾರರ ಸಹಿ ಮತ್ತು ವಿಳಾಸ**

ಮೇಲ್ಕಂಡ ಮಾಹಿತಿಗಳು ಸತ್ಯಪೂರ್ಣವಾಗಿದ್ದು ಏನಾದೂ ಬದಲಾವಣೆಗಳು ಆದಲ್ಲಿ ಕೂಡಲೇ ವರದಿ ಮಾಡಲಾಗುವುದು ಹಾಗೂ ಕಾಲಕಾಲಕ್ಕೆ ಆಗುವ ಬದಲಾವಣೆ ಬಗ್ಗೆ ತಿಳಿಸಲಾಗುವುದು.

ಟೆಂಡರ್‌ದಾರರ ಸಹಿ,

ದಿನಾಂಕ :

**ವ್ಯವಸ್ಥಾಪಕ ನಿರ್ದೇಶಕರು**
**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ**
**ಜಿಲ್ಲಾ ಸಹಕಾರ ಹಾಲು ಒಕ್ಕೂಟ**
**ಮಾಚೇನಹಳ್ಳಿ ನಿದಿಗೆ ಅಂಚೆ**
**ಶಿವಮೊಗ್ಗ.**

ಮಾನ್ಯರೇ,

ವಿಷಯ ಃ ಟೆಂಡರ್‌ನಲ್ಲಿ ಬಿಡ್ ಮಾಡುವ ಬಗ್ಗೆ.

ಉಲ್ಲೇಖ ಃ ಟೆಂಡರ್ ಪ್ರಕಟಣೆ ಐ.ಎಫ್.ಟಿ. ಸಂಖ್ಯೆ: ಶಿಸಹಾಒ/ಶೇಮತಾಂ/ಸಂಸ್ಕರಣೆ/ ಟೆಂಡರ್/01/2016–17/1208–ಎ ದಿನಾಂಕ : 16.05.2016

****

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಹಾಲು ಸಾಗಾಣಿಕೆ ಮತ್ತು ವಿತರಣೆಗಾಗಿ ದ್ವೈವಾರ್ಷಿಕ ಗುತ್ತಿಗೆಗೆ ಸಂಬಂಧಿಸಿದ ಬಿಡ್ ನಿಯಮಾವಳಿಗಳ ಮಾಹಿತಿಗಳನ್ನು ತಿಳಿದು ಹಾಗೂ ಅನುಬಂಧ 'ಬಿ' 'ಸಿ' 'ಡಿ' ನಲ್ಲಿರುವ ಷರತ್ತು ಮತ್ತು ನಿಬಂಧನೆಗಳನ್ನು ಓದಿ, ಅರ್ಥ ಮಾಡಿಕೊಂಡಿದ್ದು ಟೆಂಡರ್‌ನಲ್ಲಿ ಭಾಗವಹಿಸುತ್ತಿದ್ದೇನೆ. ಟೆಂಡರ್‌ಗೆ ಮೂಲತಃ ಅವಶ್ಯಕತೆ ಇರುವ ಇ.ಎಂ.ಡಿ. (ಬಿಡ್ಡು ಠೇವಣಿ) ಯನ್ನು ಇ–ಪ್ರೋಕ್ಯೂರ್‌ಮೆಂಟ್ ನಿಯಮಾವಳಿಯಂತೆ ಸಲ್ಲಿಸಿದೆ. ಮಾರ್ಗಕ್ಕೆ ಸಂಬಂಧಿಸಿದ ವಾಹನದ ದಾಖಲಾತಿ ಪ್ರತಿಗಳನ್ನು ಸಹ ಲಗತ್ತಿಸಲಾಗಿದೆ/ಟೆಂಡರ್ ಒಪ್ಪಿಗೆಯಾದಲ್ಲಿ ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿದ ಸಾಮರ್ಥ್ಯದ / ಮಾದರಿಯ ಸೂಕ್ತ ವಾಹನ ಖರೀದಿಸಿ ನೀಡಲಾಗುವುದು.

ಮೊತ್ತ ರೂ. ........................................ (ರೂಪಾಯಿ ......................................ಗಳು ಮಾತ್ರ) ಬ್ಯಾಂಕ್ ............................................................................

ವಂದನೆಗಳೊಂದಿಗೆ,

ಟೆಂಡರ್ ಅರ್ಜಿ ಸಲ್ಲಿಸಿದ
ಮಾರ್ಗದ ಹೆಸರು :

ಟೆಂಡರ್‌ದಾರರ ಸಹಿ,

ವಿಳಾಸ

ಅಡಕ: 1) ವಾಹನದ ಆರ್.ಸಿ. ಪ್ರಸ್ತಕದ ಪ್ರತಿ
2) ಓಟಿನ ಗುರುತಿನ ಚೀಟಿ
3) ಬ್ಯಾಂಕ್ ಪಾಸ್‌ಪುಸ್ತಕ
4) ಪಾನ್ ಕಾರ್ಡ್
5) ಪಡಿತರ ಚೀಟಿ

# ಪಟ್ಟಿ ಪರಿಶೀಲನೆ (ಚೆಕ್ ಲೀಸ್ಟ್)

## ಹಾಲು ಸಾಗಾಣಿಕೆಗಾಗಿ ಮತ್ತು ವಿತರಣೆಗಾಗಿ ಟೆಂಡರ್

| | | | | |
|---|---|---|---|---|
| 01 | ನಿಗದಿತ ಇ.ಎಂ.ಡಿ.ಮೊತ್ತ ಸಲ್ಲಿಸಲಾಗಿದೆಯಾ ? | : | ಹೌದು | ಇಲ್ಲ |
| 02 | ಇ.ಎಂ.ಡಿ.ಗೆ ಸಂಬಂಧಿಸಿದ ಡಿ.ಡಿ. ಅಥವಾ ನಗದು ಪಾವತಿಸಿದ ರಶೀದಿ ಟೆಂಡರ್ ಫಾರಂ ಜೊತೆ ಲಗತ್ತಿಸಲಾಗಿದೆಯಾ | | ಹೌದು | ಇಲ್ಲ |
| 03 | ಲಗತ್ತಿಸಿದಲ್ಲಿ ಡಿ.ಡಿ. ರಶೀದಿ ಸಂಖ್ಯೆ ದಿನಾಂಕ ಮತ್ತು ಯಾವ ಶಾಖೆಯ ಬ್ಯಾಂಕ್<br>ಡಿ.ಡಿ. ಸಂಖ್ಯೆ .......................... ದಿನಾಂಕ<br>ಬ್ಯಾಂಕ್ ಹೆಸರು .......................................... | : | | |
| 04 | ಸಾರಿಗೆದಾರರ ಪೂರ್ಣ ಮಾಹಿತಿ (ಬಯೋಡಾಟಾ) ಸಲ್ಲಿಸಲಾಗಿದೆಯೇ ? | : | ಹೌದು | ಇಲ್ಲ |
| 05 | ಗುತ್ತಿಗೆಗೆ ನೀಡುವ ವಾಹನದ ದಾಖಲಾತಿ ಪ್ರತಿ ಲಗತ್ತಿಸಲಾಗಿದೆಯೇ? | : | ಹೌದು | ಇಲ್ಲ |
| 06 | ಆದಾಯ ತೆರಿಗೆ ಪ್ರಮಾಣ ಪತ್ರ ಲಗತ್ತಿಸಲಾಗಿದೆಯೇ ? | : | ಹೌದು | ಇಲ್ಲ |
| 07 | ವೃತ್ತಿ ತೆರಿಗೆ ನೋಂದಣಿ ಪ್ರಮಾಣ ಪತ್ರ ಲಗತ್ತಿಸಲಾಗಿದೆಯೋ ? | : | ಹೌದು | ಇಲ್ಲ |
| 08 | ಬ್ಯಾಂಕರ್ ಸಾಲ್ವೆನ್ಸ್ ಪ್ರಮಾಣ ಪತ್ರ ಲಗತ್ತಿಸಲಾಗಿದೆಯೇ ? | : | ಹೌದು | ಇಲ್ಲ |
| 09 | ವಾಣಿಜ್ಯ ಟೆಂಡರ್ ದರಪಟ್ಟಿಯನ್ನು ಭಾಗ-2 ರಲ್ಲಿ ಅಕ್ಷರ ಮತ್ತು ಪದಗಳನ್ನು ದರಗಳನ್ನು ನಮೂದಿಸಿದೆಯೇ | : | ಹೌದು | ಇಲ್ಲ |
| 10 | ಲಕೋಟೆಯನ್ನು ಅರಗಿನಿಂದ ಶೀಲ್ ಮಾಡಲಾಗಿದೆಯೇ ? | : | ಹೌದು | ಇಲ್ಲ |

**ಎಚ್ಚರಿಕೆ :** ನಿಗದಿಪಡಿಸಿರುವ ಇ.ಎಂ.ಡಿ. ಲಗತ್ತಿಸದಿದ್ದಲ್ಲಿ ಟೆಂಡರ್ ನಿಯಮದ ಪ್ರಕಾರ ಟೆಂಡರ್ ಅರ್ಜಿ ರದ್ದಾಗುತ್ತದೆ.

ಟೆಂಡರ್‌ದಾರರ ಸಹಿ ಮತ್ತು ಮೊಹರು

ದಿನಾಂಕ :

ನಗದು ರಶೀದಿ ಸಂಖ್ಯೆ ದಿನಾಂಕ:

ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : (08182) 246161, 246165

## ವಾಣಿಜ್ಯ ಟೆಂಡರ್

## ದ್ವೈವಾರ್ಷಿಕ ದರ ಗುತ್ತಿಗೆ

ಇನ್ಸುಲೇಟೆಡ್ ಕಂಟೇನರ್ ಬಾಡಿ ಅಳವಡಿಸಿದ ವಾಹನಗಳಿಂದ ಕಚ್ಚಾ ಹಾಲು ಹಾಗೂ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸಾಗಾಣಿಕೆ ಮತ್ತು ವಿತರಣೆ ಮಾಡಲು ಬಿ.ಎಂ.ಸಿ. ಕೇಂದ್ರಗಳಿಗೆ ಹಾಲು ಸಾಗಾಣಿಕೆ ಮಾಡಲು ಹಾಗೂ ವಿವಿಧ ಸಾಮಾರ್ಥ್ಯದ ವಾಹನಗಳನ್ನು ಮತ್ತು ಕ್ಷೇತ್ರ/ಕಛೇರಿ ಕೆಲಸಗಳಿಗೆ ಟಾಟಾ ವಿಸ್ತಾ ಕಾರನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ವಾಣಿಜ್ಯ ಟೆಂಡರ್.

## ವಾಣಿಜ್ಯ ಟೆಂಡರ್ ಭಾಗ—2

| | | |
|---|---|---|
| 1 | ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ | ದಿನಾಂಕ: **23.05.2016** ರಿಂದ |
| 2 | ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: **22.06.2016** ರಂದು ಸಂಜೆ: 17.30 ಗಂಟೆಯವರೆಗೆ |
| 3 | **ಭರ್ತಿ ಮಾಡಿದ ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | ದಿನಾಂಕ: **24.06.2016** ರಂದು ಬೆಳಿಗ್ಗೆ: **11.30** ಗಂಟೆಗೆ |
| 4 | **ಭರ್ತಿ ಮಾಡಿದ ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | ದಿನಾಂಕ: **27.06.2016** ರಂದು ಬೆಳಿಗ್ಗೆ: **11.30** ಗಂಟೆಗೆ |

# ವಾಣಿಜ್ಯ ಟೆಂಡರ್ ಭಾಗ – 2

## ಅರ್ಹತೆ

ತಾಂತ್ರಿಕ ಟೆಂಡರ್‌ನ ಭಾಗ –1 ರಲ್ಲಿನ ನಿಯಮಾವಳಿಗಳ ಷರತ್ತು ಮತ್ತು ನಿಬಂಧನೆಗಳನ್ನು ಸಂಪೂರ್ಣವಾಗಿ ಯಾರು ಪೂರೈಸುತ್ತಾರೋ ಅಂತಹ ಬಿಡ್ಡುದಾರರ ವಾಣಿಜ್ಯ ಟೆಂಡರ್‌ನ್ನು ಅಂಗೀಕರಿಸಿ ಅಂತಿಮವಾಗಿ ಟೆಂಡರ್ ಇತ್ಯರ್ಥ ಮಾಡಲಾಗುವುದು. ಅರ್ಹತೆ ಪಡೆಯದ ಇತರೆ ವಾಣಿಜ್ಯ ಟೆಂಡರ್‌ಗಳನ್ನು ಸಾರಾಸಗಟಾಗಿ ತಿರಸ್ಕರಿಸಲಾಗುವುದು.

ಸದರಿ ನಿಯಮಗಳ ಷರತ್ತು ಮತ್ತು ನಿಬಂಧನೆಗಳಿಗೆ ನಾನು ಬದ್ಧನಾಗಿರುತ್ತೇನೆ.

ಟೆಂಡರ್‌ದಾರರ ಸಹಿ
ಹೆಸರು
ಮತ್ತು ಮೊಹರು

ವಿಳಾಸ :

ಹೆಸರು : ............................................................

ತಂದೆಯ ಹೆಸರು : ...............................................

ವಿಳಾಸ :...............................................................

.............................................................................

...................................ಪಿನ್ ಕೋಡ್....................

ದೂರವಾಣಿ ಸಂ: ................................................

## ದರಪಟ್ಟಿ

ದಿನಾಂಕ :

**ವ್ಯವಸ್ಥಾಪಕ ನಿರ್ದೇಶಕರು**
**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ**
**ಜಿಲ್ಲಾ ಸಹಕಾರ ಹಾಲು ಒಕ್ಕೂಟ**
**ಮಾಚೇನಹಳ್ಳಿ ನಿದಿಗೆ ಅಂಚೆ**
**ಶಿವಮೊಗ್ಗ.**
ಮಾನ್ಯರೇ,

**ಉಲ್ಲೇಖ :** ಸಾಗಾಣಿಕೆ ಕಾಮಗಾರಿಗೆ ದರಪಟ್ಟಿ ಸಲ್ಲಿಕೆ ಪ್ರಕಟಣೆ ಐ.ಎಫ್.ಟಿ.ಸಂಖ್ಯೆ: ಶಿಸಹಾಒ/ಸಂಸ್ಕರಣೆ/ಟೆಂಡರ್/01/2016–17/1208–ಎ ದಿನಾಂಕ : 16.05.2016

ಮೇಲಿನ ಉಲ್ಲೇಖದನ್ವಯ ನಾನು / ನಾವು ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಕೆಳಗೆ ನಮೂದಿಸಿರುವ ಮಾರ್ಗಗಳಲ್ಲಿ ಸಾಗಾಣಿಕೆ ಕಾಮಗಾರಿ ನಿರ್ವಹಿಸಲು ಅಥವಾ ಇತರೆ ಮಾರ್ಗಗಳಿಗೆ ವಾಹನ ಒದಗಿಸಲು ನನ್ನ /ನಮ್ಮ ದರಪಟ್ಟಿ ಸಲ್ಲಿಸಿರುತ್ತೇನೆ/ತ್ತೇವೆ.

| ಮಾರ್ಗದ ಹೆಸರು/ಸಂಖ್ಯೆ | ಮಾರ್ಗದ ಅಂದಾಜು ದೂರ | ಟೆಂಡರ್‌ಗಾಗಿ ಸೂಚಿಸಿರುವ ದರ ಪ್ರತಿ ಕಿ.ಮೀ.ಗೆ / ಟನ್‌ಗೆ ರೂ. ಪೈ. |
|---|---|---|
| | | ರೂ. ಪೈ.<br>ರೂ................................. (ಅಕ್ಷರಗಳಲ್ಲಿ).........<br>...........................................................................) |

ನಾನು/ನಾವು ಮತ್ತೊಮ್ಮೆ ದೃಢೀಕರಿಸಿರುವಂತೆ ನಾನು/ನಾವು ಕಾಮಗಾರಿಯ ವಿವರಗಳನ್ನು ಅಭ್ಯಸಿಸಿರುತ್ತೇವೆ. ಹಾಗೂ ಕಾಮಗಾರಿಯ ನಿಯಮ ನಿಬಂಧನೆಗಳನ್ನು, ವಿವರ ಮಾಹಿತಿಗಳನ್ನು ಮಾರ್ಗಸೂಚಿಗಳನ್ನು ಹಾಗೂ ಇತರೆ ಅಗತ್ಯ ವಿಷಯಗಳನ್ನು ಅರ್ಥ ಮಾಡಿಕೊಂಡಿರುತ್ತೇನೆ/ತ್ತೇವೆ. ನಾನು/ನಾವು ಕಾಮಗಾರಿಯ ರೀತಿ ನೀತಿಗಳನ್ನು ಸಂಪೂರ್ಣ ಅರಿತವನಾಗಿರುತ್ತೇನೆ. ಹಾಗೂ ಇದಕ್ಕೆ ಅನುಗುಣವಾಗಿಯೇ ದರಪಟ್ಟಿಯನ್ನು ಸಲ್ಲಿಸಿರುತ್ತೇನೆ. ಮೇಲೆ ತಿಳಿಸಿರುವ ದರಗಳು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. (ಆದಾಯ ತೆರಿಗೆ (ಟಿಡಿಎಸ್) ವೃತ್ತಿ ತೆರಿಗೆ ಹಾಗೂ ಚಾಲ್ತಿಯಲ್ಲಿರುವ ಇತರೆ ತೆರಿಗೆ ಮತ್ತು ರಾಜ್ಯ/ರಾಷ್ಟ್ರೀಯ ಹೆದ್ದಾರಿ ಶುಲ್ಕಗಳು /ಸೇವಾತೆರಿಗೆ ಸೇರಿರುತ್ತದೆ

ಗುತ್ತಿಗೆಗೆ ಸಂಬಂಧಪಟ್ಟಂತೆ ನಿಯಮ ನಿಬಂಧನೆಗಳನ್ನು ಕುರಿತಾಗಿ ಉಂಟಾಗಬಹುದಾದ ಯಾವುದೇ ತಂಟೆ/ತಕರಾರಿಗೆ ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ನೀಡುವ ತೀರ್ಮಾನವೇ ಅಂತಿಮ ಎನ್ನುವ ವಿಷಯಕ್ಕೆ ನಾನು/ನಾವು ಬದ್ಧರಾಗಿರುತ್ತೇನೆ/ತ್ತೇವೆ.

ಟೆಂಡರ್‌ದಾರರ ಸಹಿ
ಹೆಸರು
ತಂದೆ ಹೆಸರು